Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೮ | ತಾರೀಕು ೩–೨–೧೯೫೦ನೇ ಶುಕ್ರವಾರ | ಸಂಚಿಕೆ ೩೬

ಕಂದಾಯ ಮಸೂದೆಯು ಸಿಲೆಕ್ಟ್ ಕಮಿಟಿಗೆ ಬಿಡಲ್ಪಟ್ಟಿತು.

ಕೊಡಗು ನ್ಯಾಯವಿಧಾಯಕ ಸಭೆ.

ತಾರೀಕು ೩೧–೧–೧೯೫೦ನೇ ಮಂಗಳವಾರ ಬೆಳಿಗೆ ಹನ್ನೊಂದು ಗಂಟೆಗೆ ಕೊಡಗು ನ್ಯಾಯವಿಧಾಯಕ ಸಭೆಯು ವಿಶೇಷ ವಿಂಟಿಂಗೊಂದು ಸೆಟ್ಲ್‌ಮೆಂಟ್ ಆಗುವ ವರೆಗೆ ಐದು ವರ್ಷಗಳ ಅವಧಿಗೊಳಪಟ್ಟು ಈಗಿರುವ ಭೂಕಂದಾಯವನ್ನು ಎರಡು ಪಟ್ಟು, ಕಾಫಿ ಕಿತ್ತಳೆ ಕಂದಾಯವನ್ನು ಮೂರುಪಟ್ಟು ಏರಿಸುವ ಸರಕಾರದ ಮಸೂದೆಯನ್ನು ಚರ್ಚಿಸಲು ಕೂಡಗು ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು. ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ. ಪಿ. ಪೆಮ್ಮಯ್ಯನವರ ಪ್ರತಿ ಜ್ಞಾಪಿಧಿಯು ಮುಗಿದ ನಂತರ ಫೈನಾನ್ಸ್ ಮೆಂಬರರು ಮಸೂದೆಯನ್ನು ಸಭೆಯ ಮುಂದಿಟ್ಟು ಹೀಗೆ ಹೇಳಿದರು.

ಫೈನಾನ್ಸ್ ಮೆಂಬರರು.

'ಕೊಡಗಿನಲ್ಲಿ ಕಳೆದ ಸೆಟ್ಲ್‌ಮೆಂಟ್ ೧೯೦೭–೧೯ರಲ್ಲಿ ಆಯಿತು. ಪ್ರತಿ ೩೦ ವರ್ಷಗಳಿಗೊಮ್ಮೆ ಸೆಟ್ಲ್‌ಮೆಂಟು ಆಗುವದರಿಂದ ಸ್ವಾಭಾವಿಕವಾಗಿ ೧೯೩೯ರಲ್ಲಿ ಆಗಬೇಕಿತ್ತು. ಆದರೆ ಆಗಿನ ಅರ್ಥಿಕ ಮುಗ್ಗಟ್ಟಿನ ಕಾರಣದಿಂದಲೂ, ನಂತರದ ಯುದ್ಧದ ಪರಿಸ್ಥಿತಿಯಿಂದಲೂ ಸೆಟ್ಲ್‌ಮೆಂಟ್ ಕೆಲಸವನ್ನು ಕೈಕೊಳ್ಳಲಿಲ್ಲ. ಈಗ ಪರಿಸ್ಥಿತಿ ಸುಧಾರಿಸಿದೆ. ಆದ್ದರಿಂದ ಸೆಟ್ಲ್‌ಮೆಂಟಿನ ಕೆಲಸ ಕೈಕೊಳ್ಳಲು ಅಧಿಕಾರಿಯೊಬ್ಬರನ್ನು ತರಬೇತಿಗಾಗಿ ಮದ್ರಾಸಿಗೆ ಕಳಹಿಸಿದ್ದು ಅವರು ತರಬೇತಿಗಾಗಿ ಬಂದಿರುವರು. ಶೀಘ್ರ ಸೆಟ್ಲ್‌ಮೆಂಟ್ ಕೆಲಸವು ಪ್ರಾರಂಭವಾಗಲಿದ್ದು ಇದು ಐದು ವರ್ಷಗಳ ಒಳಗೆ ನಡೆಯಬಹುದೆಂದು ಅಂದಾಜು ಮಾಡಲಾಗಿದೆ. ಕಳೆದ ಸೆಟ್ಲ್‌ಮೆಂಟಿನ ಕಾಲಕ್ಕೆ ಆಗಿನ ರೈತನ ಆದಾಯದ ಮೇಲೆ ಕಂದಾಯವನ್ನು ನಿಶ್ಚಯಿಸಲಾಯಿತು. ಆ ಕಾಲದಲ್ಲಾ ಇದೇ ರೀತಿ ಸಮ್ಮರಿ ಕಂದಾಯದ ಏರ್ಪಾಡು ಇತ್ತು. ಈಗಿನ ಪರಿಸ್ಥಿತಿಯಲ್ಲಿ ಬೆಳಸಿನ ಬೆಲೆ ಹೆಚ್ಚಾಗಿದೆ. ಸರಕಾರದ ಆದಾಯವು ನಿಶ್ಚಿತವಾಗಿದ್ದು ಖರ್ಚು ದಿನೇ ದಿನೇ ಹೆಚ್ಚುತ್ತಿದೆ. ೧೯೫೦–೫೧ರ ಆದಾಯವು ಸುಮಾರು ೩೬ ಲಕ್ಷವಾಗಿ ಖರ್ಚು ೪೩ ಲಕ್ಷವಾಗುವದರಿಂದ ಬಡ್ಜೆಟ್ಟಿನಲ್ಲಿ ಸುಮಾರು ಏಳು ಲಕ್ಷ ಖೋತ ಬೀಳಬಹುದು. ಈ ದೃಷ್ಟಿಯಿಂದ ಈ ಮಸೂದೆಯು ಸಮರ್ಪಕವೂ ಯೋಗ್ಯವೂ ಆಗಿದೆ. ಈಮಸೂದೆಯಪ್ರಕಾರ ಭೂಕಂದಾಯವು ಈಗಿರುವದರ ಎರಡುಪಟ್ಟು, ಕಾಫಿ ಕಿತ್ತಳೆ ಮೊದಲಾದ ಕಂದಾಯವು ಮೂರುಪಟ್ಟು ಏರುವದು. ಇದು ಐದು ವರ್ಷಗಳ ಮಿತಿಗೊಳಪಟ್ಟು ಸೆಟ್ಲ್‌ಮೆಂಟ್ ಆಗುವ ವರೆಗೆ ಜಾರಿಯಲ್ಲಿರುವದು. ಈ ಮಸೂದೆಯಿಂದಾಗಿ ವಿಪರೀತ ತೊಂದರೆಗೊಳಗಾಗುವ ಯಾವದೇ ರೈತನು ತನ್ನ ದೂರನ್ನು ಚೀಫ್ ಕಮಿಷನರಲ್ಲಿ ಹೇಳಿಕೊಳ್ಳಲು ಆತನಿವಿದೆ. ಅವರ ನಿರ್ಧಾರವೇ ಕಡೇ ನಿರ್ಧಾರವಾಗುವದು.'

– ಕೌನ್ಸಿಲ್ ಸೆಕ್ರಟರಿ ಯವರು ಮಸೂದೆಯನ್ನು ಅನುಮೋದಿಸಿದರು.

ಶ್ರೀ. ಕೆ. ಪಿ ಬೆಳ್ಯಪ್ಪನವರು.

ಕೊಡಗಿನ ಚರಿತ್ರೆಯಲ್ಲಿ ಈ ರೀತಿಯು ಒಂದು ಬಲಾತ್ಕಾರದ ಕಂದಾಯದ ಮಾದರಿ ಇದೇ ಪ್ರಥಮ. ಬಡ ರೈತನು ಇಮ್ಮಡಿ ಕಂದಾಯ ಕೊಡಬೇಕನ್ನುವದು ದಂರಾದ್ಯಷ್ಟದ ವಿಚಾರ. ಸರಕಾರವು ತನ್ನ ಮನಸ್ಸಿಗೆ ತೋಚಿದಂತೆ ವರ್ತಿಸುವದೆಂಬುದಕ್ಕೆ ಇದೊಂದು ನಿದರ್ಶನ. ಕಂದಾಯವು ಏರಿಸುವ ಈ ಮಸೂದೆಯು ಅಕಾಲಿಕವಾಗಿದೆ. ಸರಕಾರವು ರೈತನ ಸ್ಥಿತಿಯನ್ನ ಮರೆತಂತೆ ಕಾಣುತ್ತದೆ. ಬೇರೆ ವಿಧಾನದಲ್ಲಿ ಸರಕಾರದ ಆದಾಯವನ್ನು ಹೆಚ್ಚಿಸುವ ಮಾರ್ಗವನ್ನು ನೋಡದೆ ಈ ಮಾರ್ಗಕ್ಕಿಳಿದುದು ಯೋಗ್ಯವಲ್ಲ. ಕಳೆದ ಅನೇಕ ವರ್ಷಗಳಿಂದ ಮಳೆ ಇಲ್ಲದೆ ಯಾ ಹೆಚ್ಚಾದ ಮಳೆಯೊಂದಿಗೆ ಬೆಳೆ ಜೆನ್ನಾಗಿ ಆಗಿರುವದಿಲ್ಲ. ಸಾಲವೂ ಕೂಡ ಅತನಿಗೆ ದೊರೆಯದಾಗಿದೆ. ಜೀವನ ನಿರ್ವಹಿಸುವದೇ ಕಷ್ಟವಾಗಿರುವಾಗ ಇದು ಸಲ್ಲದು. ಅದೂ ಅಲ್ಲದೆ ಆತನ ಬೆಳಸಿನ ಬೆಲೆ ತಗ್ಗಿದೆ. ಕಂದಾಯವು ಬಾಕಿಗಾಗಿ ಭೂಮಿ ಹರಾಜಾದ ನಿದರ್ಶನ ಇವೆ. ರೈತನ ಸಾಲವು ಹೆಚ್ಚುತ್ತಿದೆ. ಶ್ರೀ. ಬಿ. ನಾರಾಯಣಸ್ವಾಮಿ ನಾಯ್ಡುರವರ ವರದಿಯನ್ನು ನೋಡಿದರೆ ತಿಳಿಯಬರುವದು. ರೈತನಿಗೆ ಮನಸ್ಸಿಲ್ಲವೆಂದಲ್ಲ. ಗ್ರಾಮಗಳ ಸ್ಥಿತಿ ಶೋಚನೀಯವಾಗಿದೆ. ಈಗಿನ ಸರಕಾರವು ಜನರ ಸರಕಾರ. ಅದನ್ನು ಪ್ರಶ್ನಿಸಲು ಅವರಿಗೆ ಅಧಿಕಾರವಿದೆ. ವ್ಯವಸಾಯ ಕೈಗಾರಿಕೆಗೆ ಕಂದಾಯ ಹಾಕಬಾರದೆಂದು ಜವಾಬ್ದಾರ ವ್ಯಕ್ತಿಗಳು ಹೇಳುತ್ತಿರುವ ಈ ಸನ್ಮಾ ಸರಕಾರ ಹಾಗೆ ಮಾಡುವದು ಉಚಿತವಲ್ಲ. ಒಮ್ಮೆ ಕಂದಾಯ ಹಾಕಿದ ನಂತರ ಅದು ಮುಂದಿನ ಹಲವು ಪೀಳಿಗೆಗಳ ವರೆಗೆ ಸಾಗುವದು. 'ಆದ್ದರಿಂದ ಮಸೂದೆಯನ್ನು ವಿರೋಧಿಸುತ್ತೇನೆ.'

ಶ್ರೀ. ಕೆ. ಎಂ. ದೇವಯ್ಯನವರು.

ಮಸೂದೆಯನ್ನು ವಿರೋಧಿಸುತ್ತೇನೆ. ಇಂದಿನ ಬೆಳಸಿನ ಬೆಲೆ ಏರಿದೆ. ಅದ್ದರಿಂದ ಸಮ್ಮರಿ ಕಂದಾಯ ಹಾಕುವದೆನ್ನುವ ನೀತಿ ತಪ್ಪು. ಸರಕಾರ ಜಿಪುಣನಂತೆ ವರ್ತಿಸುತ್ತಿದೆ. ರೈತರ ಸ್ಥಿತಿಯನ್ನರಿಯದೆ ಹಣ ಕೂಡಹಾಕಲೆತ್ನಿಸುತ್ತಿದೆ. ರೈತನ ವ್ಯವಸಾಯ ಖರ್ಚು ಏರುತ್ತಿದೆ. ಒಂದು ರೂಪಾಯಿಯು ಗುದ್ದಲಿಗೆ ಒಂಭತ್ತು ರೂಪಾಯಿ ಆಗಿದೆ. ಮೂರಾಣೆ ಇದ್ದ ಅಳಿನ ಕೂಲಿಯು ೨–೦–೦ಗೆ ಏರಿದೆ. ರೈತನ ಸ್ಥಿತಿ ಶೋಚನೀಯವಾಗಿದೆ. ಭೂಮಿಯೂ ಫಲಭರಿತವಾಗಲ್ಲ. ವ್ಯವಸಾಯದಲ್ಲಿ ೧೯೦೭ನೇ ಇಸವಿಯ ಉತ್ಪತ್ತಿ ಪಡೆಯಲು ಅಂದಿನದಕ್ಕಿಂತಾ ಎರಡುಪಟ್ಟು ಇಂದು ಖರ್ಚು ಮಾಡಬೇಕಾಗಿ ಬಂದಿದೆ ರೈತನ ಸ್ಥಿತಿಯನ್ನು ಸರಕಾರ ಪರೀಕ್ಷಿಸಿದೆಯೇ? ಒಂದೆಡೆ ಸರಕಾರ ಹೆಚ್ಚು ಬೆಳೆಯಿರಿ ಎಂದು ಹೇಳುತ್ತಿದೆ. ಮತ್ತೊಂದೆಡೆ ಕಂದಾಯ ಹೆಚ್ಚಿಸುತ್ತಿದೆ! ಮೈಡಿಕೇರಿಯ ಸುತ್ತಮುತ್ತಲಿನ ಗ್ರಾಮಗಳನ್ನು ಪರೀಕ್ಷಿಸಿ. ಇಲ್ಲನೇ ನನ್ನದೇ ಗ್ರಾಮಕ್ಕೆ ಬನ್ನಿ ಹೊಟ್ಟೆ ತುಂಬ ಅನ್ನದೊರೆಯದ ಈ ರೈತರು ಹಿಂಡಿ ಹಿಪ್ಪೆಯೊಗಿದ್ದಾರೆ. ಇಂದು ಬಡವನ ಕೈಯಲ್ಲಿ ದುಡ್ಡಿಲ್ಲ. ಕಪ್ಪು ಸಂತೆ, ಲಭ ಬಡಕರು ದುಡ್ಡುಗಾರರಾಗಿರಬಹುದು. ಬಡ ರೈತನ ಜೀವನ ಕಷ್ಟಮಯವಾಗಿದೆ. ಅತನ ಮೇಲೆ ಹೆಚ್ಚಿನ ಭಾರ ಹೊರಿಸಕೂಡದು.

ಶ್ರೀ ಪಿ. ಐ. ಬೆಳ್ಯಪ್ಪನವರು.

ಈ ಕಂದಾಯದ ಮಸೂದೆಯು ಬಹು ಪ್ರಾಮುಖ್ಯವಾದುದಾಗಿದೆ. ದೇಶದ ಭವಿಷ್ಯದ ವಿಚಾರ ತರ್ಕ-ವಿತರ್ಕ ನಡೆದು ಕೇಂದ್ರ ಸರಕಾರವು ತಕ್ಕಿಲಕ್ಕೆ ಕೊಡಗಿನ ಸಂಯೋಜನೆಯ ಪ್ರಶ್ನೆಯನ್ನು ತೆಗೆಯಿಕೊಳ್ಳಲಾಗುವುದಿಲ್ಲವೆಂದು ನಿರ್ಧರಿಸಿದೆ. ಕೊಡಗಿನ ಭವ್ಯ ಅರ್ಥಿಕ ಬಳಕೆಯ ಮೇಲೆಯೇ ಕೊಡಗಿನ ಪ್ರತ್ಯೇಕ ಅಸ್ತಿತ್ವದ ಕಟ್ಟಡ ನಿಲ್ಲುವದಾಗಿದ್ದರಿಂದ ಈ ಕಂದಾಯ ಮಸೂದೆಗೂ ಕೊಡಗಿನ ಭವಿಷ್ಯಕ್ಕೂ ನಿಕಟ ಸಂಬಂಧವಿದೆ. ಕೊಡಗಿನ ಸಂಸ್ಕಾರವು ಯಾವುದೇ ಕೆಲಸವನ್ನು ಮಾಡಿಲ್ಲವೆಂದು ಕೆಲವರು ಹೇಳಿದರು. ೧೯೪೭ರ ಹಿಂದಿನ ಮೊತ್ತರಲ್ಲ. ಆಗ ಜನತೆಗೆ ಹಿತ ಮಾಡುವ ಸರಕಾರವಿರಲಿಲ್ಲ. ೧೯೪೭ರ ನಂತರ ದೇಶದ ಪ್ರಗತಿಯ ಕೆಲಸಗಳೇನಾಗಿವೆಯೆಂದು ನೋಡಬೇಕು. ಈ ಎರಡುವರೆ ವರ್ಷಗಳಲ್ಲಿ ಕೇಂದ್ರದ ಆಡಳಿತವು ಜನಪ್ರಿಯ ಮುಂದಾಳುಗಳಿಂದ ಸಜ್ಜೆಯಾಗಿದೆ. ನಾವು ನೇರವಾಗಿ ಕೇಂದ್ರಕ್ಕೆ ಸಂಬಂಧಿಸಲ್ಪಟ್ಟಿದ್ದೇವೆ. ೧೯೪೭ರ ನಂತರ ಘೋಸ ಖರ್ಚುಗಳೇನು ಎಂಬುದನ್ನು ನೋಡಬೇ

ಕು. ಕಾಲೇಜಿನ ಸ್ಥಾಪನೆ, ಮೂರು ಹೈಸ್ಕೂಲುಗಳು, ಎರಡು ಹೈಸ್ಕೂಲು ಕಟ್ಟಡಗಳು, ಹೊಸದರದ ವೇತನ, ಹರಿಜನೋದ್ಧಾರ ಕೆಲಸ, ಖಾಯಂ ಮತ್ತು ವಾರಾಸ್ದಾರ್ಶ್ರಗಳು ಹೆಚ್ಚುವಿಕೆ ಜಿಲ್ಲಾ ಬೋರ್ಡಿಗೆ ನಂತಿಗೆ ಜಾನುವಾರು ಮತ್ತು ವ್ಯವಸಾಯ ಇಲಾಖೆಯ ಬಡಾವಣೆ ಇನೇಮೊದಲಾದ ಹೊಸ ಖರ್ಚುಗಳು ಆಗುತ್ತಿವೆ. ಪಾನನಿಯಂತ್ರಣವನ್ನು ಜಾರಿಗೆತಂದ ಕಾರಣ ಐದು ಲಕ್ಷ ನಷ್ಟವಾಗಿದೆ. ಕಾಲೇಜು ಕಟ್ಟಡ, ಬರಪೊಳೆ ಯೋಜನೆ, ಹಾರಂಗಿ ಮತ್ತು ಲಕ್ಷ್ಮಣತೀರ್ಥ ಕಟ್ಟೆಗಳು, ಜೇತು, ಕೊಟ್ಟಮುಡಿ ಸೇತುವೆ, ಪೊನ್ನಂಪೇಟೆ ಹೈಸ್ಕೂಲು ಕಟ್ಟಡ ಇವು ತೀರ್ಪ್ರ ಆಗಬೇಕಾದವು ಹುದಿಕೇರಿ, ಹಾತೂರು, ಪಾರಾಣೆ, ಅಮ್ಮತ್ತಿ ಫೋಜರ್‌ಪೇಟೆ ಕಾಕೋಟುಪರಂಬು ಮೊದಲಾದ ಕೇಂದ್ರಗಳಿಗೆ ಹೈಸ್ಕೂಲು ಬೇಕೆಂಬ ನ್ಯಾಯಬದ್ಧ ಬೇಡಿಕೆ ಮೊದಲಾದುವನ್ನು ಸಲ್ಲಿಸಲು ಹಣಬೇಕು. ಯಾವದೇ ಸರಕಾರವಾದರೂ ಜನಹಿತ ಕೆಲಸ ಮಾಡಬೇಕಾದರೆ ಪ್ರಜೆಗಳಿಂದ ಕಂದಾಯ ಎತ್ತದೆ ಸಾಧ್ಯವಿಲ್ಲ. ಮದ್ಯಾಸು ಸರಕಾರಕ್ಕೆ ಪಾನನಿರೋಧದಿಂದಾದ ೧೭ ಕೋಟಿ ರೂ ಪಾಯಿಗಳ ನಷ್ಟವನ್ನು ಭರ್ತಿ ಮಾಡಲು ಮೂರಾಟ ತೆರಿಗೆ ಹಾಕಿದೆ. ಕೊಡಗಿನ ಹಿಂದಿನ ಉಳುವರಿಯನ್ನು ಈ ನಿಕ್ಷೇಪದಂತೆ ಸರಕಾರದ ಭನ್ನತೆ ಮಾಡುವದು ಯಾವುದೇ ಒಳ್ಳೇ ಸರಕಾರದ ನೀತಿಯಾಗಿದೆ. ಉಳುವರಿಯು ರೂ. ೭೦ ಲಕ್ಷ. ಹಣ ವಿದ್ದರೆ ಸುಧಾರಣೆಯನ್ನು ಪಡೆಯಲು ಸುಲಭ. ಮೇಲಿನ ರೀತಿ ವಿವಿಧ ಕೆಲಸಗಳಿಗಾಗಿ ನಿಶ್ಚಿತವಾಗಿರುವದರಿಂದ ಅದನ್ನು ದಿನನಿತ್ಯದ ಖರ್ಚಿಗಾಗಿ ವಿನಿಯೋಗಿಸಲಾಗುವದಿಲ್ಲ. ೧೯೩೦-೩೧ರಲ್ಲಿ ಸುಮಾರು ಏಳು ಲಕ್ಷ ಖೋತೆ ಬಿಳಿವು ದೆಂದು ಫೈನಾನ್ಸ್ ಮೆಂಬರರು ಹೇಳಿದರು. ನಮ್ಮ ದೇಶವನ್ನು ಪ್ರತ್ಯೇಕವಿಡಬೇಕಾದರೆ ಸರಕಾರದ ಆರ್ಥಿಕ ಸ್ಥಿತಿ ಉತ್ತಮವಿರಬೇಕು. ಆದರೆ ಸರ್ಕಾರವು ಈಗ ಸೂಚಿಸಿರುವ ಕಂದಾಯ ಸರಕ್ಕೆ ನಾನೊಪ್ಪುವುದಿಲ್ಲ ರೈತರ ಬಡತನದ ದೆಸೆಯಿಂದ ಈ ದರವನ್ನು ಇಳಿಸಬೇಕು. ಕುಧಾಯ ಪಾವತಿ ಮಾಡಲಾರದ ೨೫೦ ಬಟ್ಟೆ ಭೂಮಿಯು ಮತ್ತು ಹತ್ತು ಏಕರೆ ತೋಟದ ರೈತರನ್ನು ವಿನಾಯಿಸಲೂಬಹುದು ಇವನ್ನೆಲ್ಲ ಪರಿಶೀಲಿಸಿ ಮಸೂದೆಗೆ ಯೋಗ್ಯ ತಿದ್ದುಪಡಿ ಮಾಡಲು ಇವನು, ಒಂದು ಸಿಲೆಕ್ಟ್ ಕಮಿಟಿಗೆ ಬಿಡುವದು ಮೇಲು ಅವರು ಪ್ಲಾಂಟರುಗಳ ಸಂಘದವರು ಮತ್ತು ಇತರರು ಸೂಚಿಸಿರುವಂತೆ ದೇಶದ ಅಭಿಪ್ರಾಯ ತಿಳಿದು ಯೋಗ್ಯ ತಿದ್ದುಪಡಿ ಮಾಡುವಂತಾಗಲಿ. ಮುಂಬರುವ ಕೌನ್ಸಿಲ್ ವಿಂಟರ್‌ಗಿನಲ್ಲಿ ಸ್ವವಸಾಯ ಆದಾಯ ತೆರಿಗೆ ತುರೂಪೆ ಪಾಸಾದರೆ ಈ ಕಂದಾಯ ಮಸೂದೆಯನ್ನು ವಾಪಸು ತೆಗೆದುಕೊಳ್ಳುವಂತೆ ಮಾಡಬಹುದು. ಶ್ರೀಗಳಾದ ಕೆ. ಪಿ. ಅಪ್ಪಯ್ಯ, ಎಜ್. ಟಿ. ಮುತ್ತಣ್ಣ, ಕೆ. ಪಿ. ಕರುಂಬಯ್ಯ, ಕೆ. ಎಂ. ಕುಶಾಲಪ್ಪ, ಪಿ. ಎಂ. ಪೂಣಚ್ಚ,

ಕೊಡಗು ನ್ಯಾಯವಿಧಾಯಕ ಸಭೆ.

ಎನ್. ಸೋಮಣ್ಣ, ಅಬ್ದುಲ್‌ರಹಿಮಾನ್ ಖಾನ್, ಪಿ. ಐ. ಬೆಳ್ಯಪ್ಪ ಮತ್ತು ಫೈನಾನ್ಸ್ ಮೆಂಬರು (ಅಧ್ಯಕ್ಷ) ಇವರುಗಳನ್ನು ಸಿಲೆಕ್ಟ್ ಕಮಿಟಿಗೆ ಸೂಚಿಸುತ್ತೇನೆ.

ಶ್ರೀ ಕೆ. ಎಂ. ಕುಶಾಲಪ್ಪನವರು

ಜನರ ಹಿತದೃಷ್ಟಿಯಿಂದ ಸರಕಾರ ನಡೆಸಲು ಹಣ ಬೇಕು. ಹಣವಿಲ್ಲದೆ ಯಾವುದೇ ಸರಕಾರವೂ ಜನರಿಗೆ ಬೇಕಾದ ಹಿತಕಾರ್ಯಗಳನ್ನು ಮಾಡಲಾರದು. ಸರಕಾರದ ಜವಾಬ್ದಾರಿ ನಮ್ಮ ಮೇಲೆ ಬಿದ್ದಿರುವಾಗ ಹಿಂದಿಗಿಂತಾ ಇಂದು ಹೆಚ್ಚಿನ ಭಾರ ಹೊರಲು ತಯಾರಾಗಬೇಕು. ಇನ್ನೂರು ಬಟ್ಟೆ ಭೂಮಿಗೆ ಮತ್ತು ಹತ್ತು ಏಕರೆ ತೋಟಕ್ಕೆ ಕಡಿಮೆಯಿರುವವರಿಗೆ ವಿನಾಯಿತಿ ಕೊಡಬಹುದು. ಈ ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಟ್ಟು ಜನರ ಅಭಿಪ್ರಾಯ ತಿಳಿಯುಬೇಕು. ವ್ಯವಸಾಯ ಆದಾಯ ತೆರಿಗೆ ಜಾರಿಯಲ್ಲಿ ಬಂದರೆ ಈ ಮಸೂದೆಯನ್ನು ಹಿಂತೆಗೆದುಕೊಳ್ಳಬಹುದು. ಈ ಮಸೂದೆಗೆ ವಿರೋಧ ಮೂಡುವದು ಸರಿಯಲ್ಲ. ಸರಕಾರವು ಸೂಚಿಸಿದ ಕಂದಾಯ ದರವು ರೈತರು ಕೊಡಲಾರದಷ್ಟು ಹೆಚ್ಚಾಗಿಲ್ಲ. ಇವನ್ನು ಕಡಿಮೆ ಮಾಡಲು ಸಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಬೇಕು. ಈ ಮಸೂದೆಯೊಂದಿಗೆ ದೇಶದ ಭವಿಷ್ಯವೂ ಸಮಾವೇಶವಾಗಿದೆ. ಆರ್ಥಿಕ ಸ್ಥಿತಿ ಜೀನ್ಯಾಗಿಲ್ಲದಿದ್ದರೆ ಕೊಡಗು ವಿಲೀನವಾಗಬೇಕಾದೀತು. ಆದ್ದರಿಂದ ಆರ್ಥಿಕ ಸ್ಥಿತಿಯನ್ನು ತಿಳಿಗೊಳಿಸುವ ಯಾವುದೇ ಪ್ರಯತ್ನವನ್ನು ವಿರೋಧಿಸುವುದು ನಮ್ಮ ಕರ್ತವ್ಯ. ಶ್ರೀ ಪಿ. ಐ. ಬೆಳ್ಯಪ್ಪನವರ ಸೂಚನೆಗೆ ಅನುಮೋದಿಸುತ್ತೇನೆ.

ಉಪಸೂಚನೆ.

ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂಬ ಶ್ರೀ ಪಿ. ಐ ಬೆಳ್ಯಪ್ಪನವರ ಉಪಸೂಚನೆಯು ಚರ್ಚೆಗೆ ಇಡಲ್ಪಟ್ಟಿತು ಶ್ರೀ ಕೆ. ಮಲ್ಲಪ್ಪನವರು ಉಪಸೂಚನೆಯನ್ನು ವಿರೋಧಿಸುತ್ತಾ "ಕಂದಾಯ ಹಾಸೂದೆಯ ಬಗ್ಗೆ ಜನರ ಅಭಿಪ್ರಾಯ ತಿಳಿಯುವ ಅವಶ್ಯವಿಲ್ಲ. ಈ ಬೆಳಿಗ್ಗೆ ನಡೆದ ಸಾರ್ವಜನಿಕ ವಿರೋಧ ಪ್ರದರ್ಶನದಿಂದಲೇ ಅದು ತಿಳಿಯುತ್ತೆ. ಸಾರ್ವಜನಿಕ ಅಭಿಪ್ರಾಯವು ವಿರೋಧವಿದ್ದು ಮಸೂದೆಯನ್ನು ಪೂರ್ಣ ವಿರೋಧಿಸುತ್ತದೆ. ಸಾವು ಮಸೂದೆಗೇ ವಿರೋಧವಿರುವಾಗ ಈ ಸಿಲೆಕ್ಟ್ ಕಮಿಟಿಗೆ ಬಿಡುವ ಸೂಚನೆಯನ್ನು ಒಪ್ಪಲಾರೆವು. ಸಿಲೆಕ್ಟ್ ಕಮಿಟಿಗೆ ಬಿಟ್ಟರೆ ಕಂದಾಯದ ತತ್ವವನ್ನು ಒಪ್ಪಿಕೊಂಡಂತಾಗುವದು" ಎಂದರು.

ಶ್ರೀ ಕೆ. ಕೆ. ಬೆಳ್ಯಪ್ಪನವರು ಮಾತಾಡುತ್ತಾ "ಬೆಳ್ಯಪ್ಪನವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಸಿಲೆಕ್ಟ್ ಕಮಿಟಿಗೆ ಬಿಡುವುದೆಂದರೆ ಮಸೂದೆಯನ್ನು ಒಪ್ಪಿದಂತೆ. ಈ ಮಸೂದೆಯು ನಮ್ಮಲ್ಲಿ ಪ್ರತ್ಯೇಕವಾದ, ಸಂಯೋಜನಾವಾದಗಳ ಮೂಡು ಬಂದಿದೆ. ಈ ಸನುರಿ ಕಂದಾಯ ನೀತಿಯು ಯಾವುದಕ್ಕೂ ಸಹಕಾರಿಯಲ್ಲ. ಪಾನನಿರೋಧದಿಂದ ಕೊಡಗಿನ ಬೊಕ್ಕಸಕ್ಕೆ ಏಳು ಲಕ್ಷ ನಷ್ಟವಾಗಿದೆ. ಕೊಡಗಿನ ಬಹುಮತ ಜನರು ಪಾನನಿರೋಧಕ್ಕೆ ವಿರೋಧವಿದ್ದಾರೆ. ಸರಕಾರವೂ ಕಾಂಗ್ರೆಸ್ ಪಕ್ಷವೂ ಅದನ್ನು ಜಾರಿಗೆ ತರಲು ಕಂಕಣಬದ್ಧರಾಗಿದ್ದಾರೆ. ಈ ಮಸೂದೆ ಕೇಂದ್ರ ಸರ್ಕಾರದ ಒಪ್ಪಿಗೆಯಂತೆ ತರಲ್ಪಟ್ಟಿದೆಯೆಂದು ಹೇಳುತ್ತಾರೆ. ಕೇಂದ್ರ ಸರಕಾರಕ್ಕೇನು ಗೊತ್ತು ? ನೂರಾರು ಜನರು, ಹೆಂಗಸರೂ ಕೂಡ ಇದನ್ನು ವಿರೋಧಿಸಿದ್ದಾರೆ ಈ ಬೆಳಿಗ್ಗೆ ಸಾವಿರಾರು ಅರ್ಜಿಗಳು ಚೀಫ್ ಕಮಿಷನರಿಗೆ ಕೊಡಲ್ಪಟ್ಟಿವೆ. ನಾನು ಉಪಸೂಚನೆಯನ್ನು ವಿರೋಧಿಸುತ್ತೇನೆ" ಎಂದರು.

ಉಪಸೂಚನೆಯ ಮೇಲೆ ಮಾತಾಡಿದವರು ಮಸೂದೆಯ ಮೇಲೆ ಮಾತಾಡಬಹುದೇ ಎಂದು ಶ್ರೀ ಮಲ್ಲಪ್ಪನವರು ಕೇಳಿದರು. ಪ್ರೆಸಿಡೆಂಟರು ಮಾತಾಡಬಹುದೆಂದರು.

ಶ್ರೀ ಕೆ. ಪಿ. ಅಪ್ಪಯ್ಯನವರು

ಸಿಲೆಕ್ಟ್ ಕಮಿಟಿಗೆ ಮಸೂದೆಯನ್ನು ಬಿಟ್ಟರೆ ಜನಾಭಿಪ್ರಾಯದಂತೆ ಮಸೂದೆಗೆ ತಿದ್ದುಪಡಿ ಮಾಡಬಹುದು. ಕೊಡಗಿನ ಪ್ಲಾಂಟರುಗಳ ಹಾಗೂ ರೈತರ ಸ್ಥಿತಿ ಜೀನ್ಯಾಗಿಲ್ಲ. ಅವರ ಸ್ಥಿತಿಗನುಗುಣ ಕಂದಾಯದ ದರವನ್ನು ನಿಶ್ಚಯಿಸುವ ಸಾಧ್ಯತೆ ಸಿಲೆಕ್ಟ್ ಕಮಿಟಿಗಿದೆ. ಯಾವದೇ ಜನಹಿತ ಸರಕಾರವು ಆರ್ಥಿಕ ಬಲವಿಲ್ಲದೆ ನಡೆಯಲಾರದು. ಕೊಡಗಿನ ಸರಕಾರವು ಇತ್ತೀಚೆಗೆ ಅನೇಕ ಉಪಯುಕ್ತ ಹಾಗೂ ಜನೋಪಯೋಗಿ ಕೆಲಸಗಳನ್ನು ಮಾಡಿದೆ. ಕೊಡಗಿನ ಭವಿಷ್ಯವು ಅದರ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿದೆ. ಕೇಂದ್ರವು ಆರ್ಥಿಕ ದೃಷ್ಟಿಯಿಂದಲೇ ನನ್ನ ಸಮಸೂಚನೆಗಳನ್ನು ನೋಡಬೇಕಾಗಿದೆ. ಆದ್ದರಿಂದ ದೇಶವನ್ನು ಪ್ರತ್ಯೇಕವಿಟ್ಟುಕೊಂಡು ಜವಾಬ್ದಾರಿ ಆಡಳಿತ ಪಡೆಯಬೇಕೆನ್ನುವವರೂ ಈ ಮಸೂದೆಗೆ ತತ್ವತಃ ವಿರೋಧಿಸಬಾರದು.

ಶ್ರೀ ಕೆ. ಮಲ್ಲಪ್ಪನವರು

ಕೊಡಗಿನ ರೈತನಿಗೆ ಹೆಚ್ಚಿನ ಕಂದಾಯ ಕೊಡಲು ಶಕ್ತಿಯಿದೆಯೇ? ಈಗ ಈ ಕಂದಾಯದ ಅವಶ್ಯಕತೆಯಿದೆಯೇ? ಎಂಬ ಎರಡು ವಿಚಾರಗಳನ್ನು ಪರಿಶೀಲಿಸಬೇಕು. ಕೊಡಗಿನ ರೈತನು ಹೆಚ್ಚಿನ ಕಂದಾಯ ಕೊಡುವ ಸ್ಥಿತಿಯಲ್ಲಿ ಇಲ್ಲ. ಆತನ ಬೆಳಸಿಗೆ ಬೆಲೆ ಇರಬಹುದು. ಆದರೆ ಆತನ ಉತ್ಪತ್ತಿ ಕಡಿಮೆಯಾಗುತ್ತಿದೆ. ಅಕಾಲಿಕ ಮಳೆಯಿಂದ ನಷ್ಟವಾಗುತ್ತಿದೆ ತೋಟಗಳು ದಿವಾಳಿಯೆದ್ದಂತೆ ಸಾರವನ್ನು ಕಳಕೊಂಡು ಫಲನೀಡುತ್ತಾಗಿಲ್ಲ. ವ್ಯವಸಾಯ ಖರ್ಚು ಒಂದಕ್ಕೆ ಹತ್ತರಂತೆ ಏರಿದೆ. ಆದಾಯವು ತುಲನಾತ್ಮಕವಾಗಿ ಕಡಿಮೆಯಾಗಿದೆ. ನಿವ್ವಳ ಉಳುವರಿ ಕಡಿಮೆ. ರೈತನು ಹೆಚ್ಚಿನ ಕಂದಾಯ ಕೊಡಲಾರ. ದೇಶದ ರೈತನ ಮೇಲಿರುವ ಸಾಲವು ೨೦೦ ಕೋಟಿಗೆ ತಲಪಿದೆಯೆಂಬುದೇ ರೈತನ ಸ್ಥಿತಿಯನ್ನು ಸಾರಿ ಹೇಳುತ್ತಿದೆ. ಇಂಥಾ ಪರಿಸ್ಥಿತಿಯಲ್ಲಿ ಹೆಚ್ಚಿನ ಕುದಾಯವು ಅನ್ಯಾಯ. ಈ ಪರಿಸ್ಥಿತಿಯಲ್ಲಿ ಕಂದಾಯ ಏಕೆ ಹಾಕಬೇಕು? ಸರಕಾರವು ನಾನಾ ಯೋಜನೆಗಳನ್ನು ಮಾಡುತ್ತಿದೆ. ಯುದ್ಧೋತ್ತರ ಯೋಜನೆಗೆಂದು ೩೦ ಲಕ್ಷವಿಟ್ಟಿದೆ. ಆದರೆ ಮಾಡಿದುದೇನು? ಯೋಜನೆಗಳ ಪರಿಶೀಲನಾ ಅಧಿಕಾರಿಗಳ ಬಿಳಿ ವಿನಹ ಬೇರೇನೂ ಆಗಿಲ್ಲ. ವರ್ಷಾಂತ್ಯದಲ್ಲಿ ಉಳುವರಿ ಸಿಲ್ಕು ೬೦ ಲಕ್ಷವಾಗಬಹುದು ಜನತೆಯ ಸ್ಥಿತಿಯನ್ನು ಉತ್ತಮಗೊಳಿಸಲು ಇನ್ನು ಖರ್ಚು ಮಾಡಲ್ಪಟ್ಟ ನಂತರ ಕಂದಾಯದ ಮಾತು ಬಂದಿದ್ದರೆ ಯಾರೂ ವಿರೋಧಿಸುತ್ತಿರಲಿಲ್ಲ. ಬಡ್ಜೆಟ್ಟಿನಲ್ಲಿ ಖೋತೆ ಇದೆಯೆಂಬುದನ್ನು ಒಪ್ಪುವದಿಲ್ಲ. ಬಡ್ಜೆಟ್ಟಿನಲ್ಲಿ ಅಂದಾಜು ಮಾಡುವದೊಂದು ವರ್ಷಾಂತ್ಯದಲ್ಲಿ ಆಗುವದು ಇನ್ನೊಂದು ಎಂಬುದು ಅನುಭವದ ಮಾತು. ಏಳು ಲಕ್ಷ ಖೋತೆ ಇದೆ ಎಂಬುದು ಕೇವಲ ಕಾಗದದ ಖೋತೆ! ಉಳುವರಿಯನ್ನು ಖರ್ಚು ಮಾಡದೆ ಕಂದಾಯ ಹಾಕಲು ಕೂಡದು. ಸರಕಾರವು ಏನೂ ಮಾಡಿಲ್ಲ; ಮುಂದೆ ಮಾಡುವದೂ ಇಲ್ಲವೆಂಬುದು ನನಗೆ ಸ್ವಯಂಸಿದ್ಧವಾಗಿದೆ. ಇದಕ್ಕೆ ನಿದರ್ಶನ ಕೊಡಬೇಕಿದ್ದಿ. ಕೊಡ್ಲಿಪೇಟೆಯಲ್ಲಿ ಮಸೀದಿಯಿಂದ ಮುಂದೆ ವಾದ್ಯದ ವಿಚಾರ ಗಲಭೆಯಾಯಿತು. ಆದ್ದರಿಂದ ಮಸೀದಿಯ ಮುಂದಿನ ರಸ್ತೆಯನ್ನು ಬೇರೆ ಮಾಡುವ ಒಪ್ಪಂದವಾಗಿರುತ್ತು. ೩,೦೦೦ ಅಂದಾಜಾಗಿ ಬಡ್ಜೆಟ್ಟಿನಲ್ಲಿ ಹಣವಿಡಲ್ಪಟ್ಟಿತು. ಈ ವರೆಗೂ ಏನೊಂದೂ ಆಗಲಿಲ್ಲ. ಮೊನ್ನೆ ರಿಪಬ್ಲಿಕ್ ದಿನದಂದೂ ಅಲ್ಲಿ ಗಲಾಟೆ ನಡೆದಿದೆ. ಹೆಬ್ಬಾಲೆ ಗೌಡಮದಲ್ಲಿ ನೀರಿನ ತೊಂದರೆ ಹೇಳಲಂಗುಪುದಲ್ಲ ಎರಡು ಮೈಲು ದೂರದಿಂದ ನೀರು ಬರಬೇಕು. ಅನೇಕ ಹೆಂಗಸರಿಗೆ ದಿನವಿಡೀ ಇದೇ ಕೆಲಸ. ಸರಕಾರಕ್ಕೆ ತನ್ನ ಬೊಕ್ಕಸದಲ್ಲಿ ೬೦ ಲಕ್ಷ ಉಳುವರಿ ಇದ್ದು ಏನೂ ಮಾಡಿಲ್ಲ. ಮಳೆಯು ಅಭಾವದಿಂದ ಆ ಭಾಗದ ಜನರಿಗೆ ಏನೂ ಬೆಳೆಸಲು ಸಾಧ್ಯವಿಲ್ಲದಾಗಿದೆ. ಇತ್ತಲಿಂದ ಕೊಗಿಕೊಂಡೂ ಯಾವ ಪ್ರಯೋಜನವಾಗಿಲ್ಲ. ಸರಕಾರ ಹೆಚ್ಚು ಬೆಳೆಸಿರಿ ಎಂದು ಕೂಗುತ್ತದೆ. ಆದರೆ ಹಾಗೆ ಬೆಳೆಸಲು ರೈತನಿಗೆ ಯಾವ ಸಹಾಯ ಮಾಡಿದೆ? ಸ್ವರ್ಗವನ್ನೇ ಕೊಡುವ ಭರವಸೆ ಕೊಡುವದು. ಕಡೆಗೆ ಕಂದಾಯದ ಉಡುಗೊರೆಯೇ? ಈ ಕಂದಾಯವು ನ್ಯಾಯಬದ್ಧವಾದ ವರೋಡೆ ಎನ್ನಬೇಕಿದೆ. ಕೊಡಗಿನ ಭೂವಿಯು ಆದಾಯವನ್ನು ಪರಿಶೀಲಿಸಿ ಕಂದಾಯ ಹಾಕಲು ಸೆಟ್ಲ್‌ಮೆಂಟ್ ಆಫೀಸರ ನೇಮಕವಾಗಿ ಅವರು ಕೆಲಸ ಪ್ರಾರಂಭಿಸುವ ಈ ಸಮಯದಲ್ಲಿ ಈ ಸಮಯ ಕಂದಾಯ ಹಾಕಿದರೆ ಅವರ ಕೈ ಕಟ್ಟಿದಂತಾಗಿ ರೈತರಿಗೆ ಅಹಿತವಾಗುವುದು.

ಶ್ರೀ. ಎಸ್. ಎಸ್. ನಾರಾಯಣ ಮೂರ್ತಿಯವರು.

ಮಸೂದೆಗೆ ನಷ್ಟ ತೀವ್ರ ವಿರೋಧವಿದೆ. ನನಗೆ ಮೊದಲು ಮಾತಾಡಿದವರು

(೭ನೇ ಪುಠಕ್ಕೆ ಸಾಗಿದೆ)

ಪ್ರಜಾ ರಾಜ್ಯ ದಿನೋತ್ಸವ.

ಮಡಿಕೇರಿ.

ತಾರೀಕು ೨೬-೧-೫೦ನ್ನು ಹಿಂದೂ ದೇಶದ ಇತರ ಕಡೆಗಳಂತೆಯೇ ಇಲ್ಲಿಯೂ ವಿಜೃಂಭಣೆಯಿಂದ ನಡೆಸಲಾಯಿತು. ಮಡಿಕೇರಿ ಪಟ್ಟಣವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಬೆಳಿಗ್ಗೆ ಕೋಟೆಯಲ್ಲಿ ಧ್ವಜಾರೋಹಣದ ನಂತರ ಮೆರವಣಿಗೆ ನಡೆಯಿತು. ಪೊಲೀಸರ ದಳವೂ, ಆನೆ, ಕಾರುಬಾರಿಗಳ ಸಾಲೂ ಮನೋರಂಜಕವಾಗಿತ್ತು. ಸಾಯಂಕಾಲ ಕೌನ್ಸಿಲ್ ಹಾಲ್‌ನಲ್ಲಿ ಸಾರ್ವಜನಿಕ ಸಭೆನಡೆದು ಅನೇಕರು ಭಾಷಣ ಮಾಡಿದರು. ಸಾಯಂಕಾಲ ಚೀಫ್ ಕಮಿಷನರಿಂದ ಆವ್ಹಾನಿತರಾಗಿದ್ದ ಸುಮಾರು ೭೦೦ ಜನರಿಗೆ ಸರಕಾರಿ ಔತಣವು ನಡೆಯಿತು. ಈ ಔತಣಕ್ಕೆ ವಿರುದ್ಧವಾಗಿ ಸಾರ್ವಜನಿಕ ಔತಣ ಒಂದನ್ನು ಕೊಡವ ಸಮಾಜ ಕಟ್ಟಡದಲ್ಲಿ ಕೆಲವರು ಏರ್ಪಡಿಸಿದ್ದರು. ಜಾತಿ ಮತ, ಬಡವ ಬಲ್ಲಿದರೆಂಬ ಬೇಧವಿಲ್ಲದೆ ಎಲ್ಲರಿಗೂ ಊಟ ಏರ್ಪಡಿಸಲಾಗಿತ್ತು. ವಾದ್ಯ, ನೃತ್ಯಗಳಿಂದ ಸಂತೋಷದಾಯಕವಾಗಿತ್ತು. ಸರಕಾರ ಔತಣದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದ ಜನರನ್ನು ಈ ಸಾರ್ವಜನಿಕ ಔತಣಕ್ಕೆ ಬಂದಿದ್ದ ಕೆಲವರು ತಡೆದು ಬೈದು ಉಗುಳಿ ಅವಮಾನ ಮಾಡಿದರೆಂದೂ ಈ ಬಗ್ಗೆ ಪೊಲೀಸರಿಗೆ ಪುಕಾರು ಹೋಗಿ ತನಿಖೆಯಾಗುತ್ತಿದೆಯೆಂದೂ ತಿಳಿಯಬಂದಿದೆ. ತಾರೀಕು ೨೭ರಲ್ಲಿ ಸಾರ್ವಜನಿಕ ಆಟೋಟಗಳ ಸ್ಪರ್ಧೆ ನಡೆಯಿತು.

ಮೂರ್ನಾಡು.

ಇಲ್ಲಿ ಶ್ರೀ ತೆಕ್ಕಡ ಪೂವಯ್ಯನವರ ಅಧ್ಯಕ್ಷತೆಯಲ್ಲಿ ಪ್ರಜಾರಾಜ್ಯ ದಿನಾಚರಣೆ ನಡೆಯಿತು. ಬೆಳಿಗ್ಗೆ ಪ್ರಭಾತ ಫೇರಿ ನಡೆದನಂತರ ಶ್ರೀ ಒಡಿಯಂಡ ಗಣಪತಿಯವರಿಂದ ಧ್ವಜಾರೋಹಣ ನಡೆಯಿತು. ಬಾಲಕ ಬಾಲಕಿಯರಿಗೂ ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆ ನಡೆಯಿತು. ನಂತರ ನಡೆದ ಸಭೆಯಲ್ಲಿ ಶ್ರೀಗಳಾದ ಬಿ. ಜಿ. ಮುತ್ತಣ್ಣ, ಪಿ. ಮುದ್ದಪ್ಪ, ಬಿ. ದೇವಯ್ಯ, ಬಿ. ಬಿ. ಮುತ್ತಣ್ಣ, ಮೊದಲಾದವರು ಭಾಷಣಮಾಡಿದರು. ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನವಿತರಣೆಯಾದನಂತರ ಹೆಂಗಸರಿಗೂ ಮಕ್ಕಳಿಗೂ ಸಿಹಿತಿಂಡಿ ಹಂಚಲಾಯಿತು. ಹರಿಜನರಿಗೂ, ಬಡವರಿಗೂ ಅಕ್ಕಿ ಹಂಚಲಾಯಿತು. ಪ್ರಜಾರಾಜ್ಯಕ್ಕೆ ಶುಭವಾಗಲಿ ಎಂದು ಶ್ರೀರಾಮ ಮಂದಿರದಲ್ಲೂ ಮಸೀದಿಯಲ್ಲೂ ಪೂಜೆನಡೆಯಿತು.

ಕುಂಬಳದಾಳು.

ಸಾರ್ವಜನಿಕರೂ ಶಾಲಾ ವಿದ್ಯಾರ್ಥಿಗಳೂ ವಾದ್ಯಘೋಷಗಳಿಂದೊಡಗೂಡಿ ಮೆರವಣಿಗೆಯ ನಂತರ ಶ್ರೀ ಮುಕ್ಕಾಟೀರ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆನಡೆಯಿತು. ಆಟೋಟಗಳ ಸ್ಪರ್ಧೆ ನಡೆದು ಇನಾಮು ಹಂಚಲ್ಪಟ್ಟಿತು. ಶಾಲಾ ಮುಖ್ಯೋಪಧ್ಯಾಯರು ಸೂಕ್ತವಾಗಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ನಂತರ ಸಭೆ ಮುಕ್ತಾಯವಾಯಿತು. ಎಲ್ಲರಿಗೂ ಊಟ ಉಪಚಾರದ ಏರ್ಪಾಡು ಮಾಡಲಾಗಿತ್ತು.

ಬೆಳ್ಳೂರು.

ಇಲ್ಲಿಯ ಹರಿಜನ ಶಾಲೆಯ ಬಳಿ ಇಲ್ಲಿಯ ಗ್ರಾಮಸ್ಥರು ಆಟೋಟಗಳ ಸ್ಪರ್ಧೆ ನಡೆಸಿ ನಂತರ ಶಾಲೆಯಲ್ಲಿ ಶ್ರೀ ಬಿ ಐ. ಅಚ್ಚಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನೆರೆದರು. ಬಹುಮಾನ ಹಂಚಿದನಂತರ ಶ್ರೀ ಐ. ಎಸ್. ತಿಮ್ಮಯ್ಯನವರು, ಭಾಷಣಮಾಡಿ ಹರಿಜನರಿಗಾಗಿ ಸ್ಥಾಪಿತವಾಗಿರುವ ಶಾಲೆಯ ಪುರೋಭಿವೃದ್ಧಿಯನ್ನು ಕುರಿತು ವಿವರಿಸಿದರು. ನಂತರ ವಂದನಾರ್ಪಣೆಯಿಂದ ಸಭೆ ಮುಕ್ತಾಯಗೊಂಡಿತು.

ತಿತಿಮತಿ.

ಇಲ್ಲಿಯ ಶಾಲಾ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಸ್ಥರೂ ಶಾಲಾ ಆವರಣದಲ್ಲಿ ಶ್ರೀ ಎಂ. ಎನ್. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಶ್ರೀ ಪಿ. ಎನ್. ಚಂಗಪ್ಪನವರಿಂದ ಧ್ವಜಾರೋಹಣದ ನಂತರ ರಾಮಮಂದಿರದಲ್ಲಿ ಪೂಜೆಯಾಯಿತು. ನಂತರ ಮೆರವಣಿಗೆಯಾಗಿ ಪೋಸ್ಟಾಫೀಸು ಎದುರುಗಡೆ ವೈದಾನದಲ್ಲಿ ಆಟೋಟಗಳ ಸ್ಪರ್ಧೆ ನಡೆಯಿತು. ಬಹುಮಾನ ವಿತರಣವಾದ ನಂತರ ಶ್ರೀ ಪಿ. ಎನ್, ಚಂಗಪ್ಪನವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದನಂತರ ಸಭೆ ಮುಕ್ತಾಯವಾಯಿತು. ನಂತರ ಎಲ್ಲರಿಗೂ ಸಿಹಿತಿಂಡಿ ಹಂಚಲಾಯಿತು.

ಭಾಗಮಂಡಲ.

ಬೆಳಿಗ್ಗೆ ಶ್ರೀ ಎಚ್. ಎಸ್. ಹೆಬ್ಬಾರ್ ರವರಿಂದ ಧ್ವಜಾರೋಹಣ ನಡೆಯಿತು. ಪುಮುಖ ಮಂದಿಯ ಭಾವಚಿತ್ರದಿಂದೊಡಗೂಡಿ ವಾದ್ಯಘೋಷದೊಡನೆ ಮೆರವಣಿಗೆ ನಡೆಯಿತು. ನಂತರ ಶಾಲಾ ಮಕ್ಕಳಿಗೂ ಹರಿಜನರಿಗೂ ಆಟೋಟಗಳ ಸ್ಪರ್ಧೆ ನಡೆಯಿತು. ಶ್ರೀ ಭಗಂಡೇಶ್ವರ ದೇವಸ್ಥಾನದಲ್ಲಿ ಪೂಜೆಯನಂತರ ಸಹಕಾರ ಭವನದಲ್ಲಿ ಶ್ರೀ ಕೆ. ಬಿ. ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಆಟೋಟಗಳಲ್ಲಿ ಜಯಶೀಲರಾದವರಿಗೆ ಬಹುಮಾನ ಹಂಚಲಾಯಿತು. ಶ್ರೀಗಳಾದ ಡಾ. ಎನ್. ವೆಂಕಟರಂಗಾಚಾರ್, ಬಿ. ಕೆ. ಮುತ್ತಪ್ಪ ಇವರುಗಳು ಭಾಷಣಮಾಡಿದರು. ನಂತರ ಶ್ರೀ ಎಚ್. ಎಸ್. ಹೆಬ್ಬಾರ್ ಮತ್ತು ಬಿ. ಡಬ್ಲ್ಯೂ. ಭೀಮಯ್ಯನವರು ಕೊಟ್ಟ ಅಕ್ಕಿಯನ್ನು ಬಡವರಿಗೂ ಹರಿಜನರಿಗೂ ಹಂಚಲಾಯಿತು. ಎಲ್ಲರಿಗೂ ಲಘು ಉಪಹಾರವಿತ್ತು. ಸಾಯಂಕಾಲ ದೀಪೋತ್ಸವ ಮತ್ತು ಶ್ರೇಯಃಪ್ರಾರ್ಥನೆಯು ನಡೆಯಿತು.

ದೇವಣಗೇರಿ.

ಸುತ್ತು ಮುತ್ತಲಿನ ಗ್ರಾಮದ ಜನರೂ, ಶಾಲಾ ವಿದ್ಯಾರ್ಥಿಗಳೂ ಸೇರಿ ಮೆರವಣಿಗೆ ಆಟೋಟಗಳ ಸ್ಪರ್ಧೆ ನಡೆಯಿತು. ಊಟಉಪಚಾರದ ನಂತರ ಮಧ್ಯಾಹ್ನದ ಮೇಲೆ ಶ್ರೀ ಮುಕ್ಕಾಟೀರ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಬಹುಮಾನ ವಿತರಣೆಯನಂತರ ಶ್ರೀಗಳಾದ ಎಂ. ಪಿ. ತಿಮ್ಮಯ್ಯ, ಎಂ. ಎಂ. ಮೂಚಯ್ಯ. ಪುಗ್ಗೇರ ಜೋಯಪ್ಪ, ಪುಗ್ಗೇರ ಚಿಂಣಪ್ಪ, ಬಿದ್ದಂಡ ಮೂಚಯ್ಯ, ಎಂ. ಆರ್. ಕೃಷ್ಣಯ್ಯ, ಎ. ಎಂ. ರಾಮರತ್ನ ಮೊದಲಾದವರು ಭಾಷಣಮಾಡಿದರು. ನಂತರ ಅಧ್ಯಕ್ಷರ ಸಮಯೋಚಿತ ಸಮಾರೋಪ ಭಾಷಣದಿಂದ ಸಭೆ ಮುಕ್ತಾಯಗೊಂಡಿತು.

ಕಣ್ಣಂಗಾಲ.

ಅಮ್ಮತ್ತಿನಾಡಿನ ಕಣ್ಣಂಗಾಲ, ಬೈರಂಬಡ, ಎಡೂರು, ಹೆಚ್ಚಿನಾಡು ಗ್ರಾಮದ ಜನರೂ ಶಾಲಾ ವಿದ್ಯಾರ್ಥಿಗಳೂ ಸೇರಿ ಗ್ರಾಮದ ದೇವಸ್ಥಾನದಲ್ಲಿ ಭಜನೆ ಪೂಜೆ ನಡೆಸಿ, ಮಹಮದೀಯರ ಮಸೀದಿಗೂ ಮೆರವಣಿಗೆ ಹೋಗಿ ಸಿಹಿತಿಂಡಿ ಹಂಚಿದನಂತರ ಬಹುಮಾನವಿತರಣೆ ನಡೆಯಿತು. ಹಿಂದೂ ಮುಸ್ಲಿಮರು ಒಂದಾಗಿ ಕಲೆತು ಪ್ರಜಾದಿನವನ್ನು ಆಚರಿಸಿದರು.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !!
ಅನುಭವಶೀಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್
ಮುಖ್ಯ ಖಜೇರಿ,
ಕೆದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮಿರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ಕಾಲು ½% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಜೆನಾರಿಸ್ ಸಿಲ್ಕುಗಳು, ಸೇಲಂ, ಫುಲ್ಕುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮೂದರಿಯ ಜೆನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಒಟ್ಟಿಗೆ ತೆಗೆಯುವವರು ಈ ವಿಷಯಕ್ಕೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲ್ಪಡುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)
12-5

ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ವಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕ! ಪಟ್ಟೊ ಬ್ರದರ್ಸ್ ಎಂಬುದ ಕೈ!

ಪಟ್ಟೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು
52-5

ಕೊಡಗು

ತಾ. ೩–೨–೧೯೫೦ನೇ ಶುಕ್ರವಾರ

ಕಂದಾಯ ಮಸೂದೆ.

ಈಗಿರುವ ಕಂದಾಯ ದತ್ತವನ್ನು ತಾತ್ಕಾಲಿಕವಾಗಿ, ಅಂದರೆ ರಿಸೆಟ್ಲ್‌ಮೆಂಟ್ ಮುಗಿಯುವ ವರೆಗೆ, ಏರಿಸಬೇಕೆಂಬ ಮಸೂದೆಯು ತಾ. ೩೧–೧–೫೦ ರಲ್ಲಿ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಇದನ್ನು ಕುರಿತು ಕೌನ್ಸಿಲು ಮೆಂಬರುಗಳಲ್ಲಿ ಎರಡು ಭಿನ್ನ ಅಭಿಪ್ರಾಯಗಳು ಸ್ಪಷ್ಟವಾಗಿ ಕಾಣಬರುತಿತ್ತು. ಒಂದು ಪಕ್ಷದವರು ತೆರಿಗೆ ಕೊಡುವವರ ಸ್ಥಿತಿಯನ್ನು ಬಹು ಹೀನವಾಗಿರುವ ಈ ಸಮಯದಲ್ಲಿ ಸರಕಾರದ ಬೊಕ್ಕಸದಲ್ಲಿ ಉಳುವರಿ ಇಟ್ಟುಕೊಂಡು ಈ ತರದ ಅವಶ್ಯವಿರುವ ಕಂದಾಯವನ್ನು ಜನರ ಮೇಲೆ ಹೊರಿಸುವದು ಸರಿಯಲ್ಲವೆಂದು ವಾದಿಸಿದರು. ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತು ಕೊಡಗಿಗೆ ಅದರ ಫಲವು ಸಂಪೂರ್ಣ ದೊರೆಯದಿದ್ದರೂ ಈ ಪ್ರಾಂತವನ್ನು ಸೇರವಾಗಿ ಆಳುತ್ತಿರುವ ಕೇಂದ್ರ ಸರಕಾರವು ಜನಪ್ರಿಯ ಕಾಂಗ್ರೆಸು ಮುಂದಾಳುಗಳಿಂದ ನಡೆಸಲ್ಪಡುತ್ತಿರುವದರಿಂದಲೂ, ಈ ಮಸೂದೆಯು ಅವರಿಂದ ಒಪ್ಪಲ್ಪಟ್ಟರುನ್ನರಿಂದಲೂ, ನಮ್ಮ ಪ್ರಾಂತವ ಸರಕಾರನನ್ನು ನಡೆಸಲು ಬರುವ ವರ್ಷದ ಬಡ್ಜೆಟ್ಟಿನಲ್ಲಿ ಸುಮಾರು ಏಳು ಲಕ್ಷ ರೂಪಾಯಿ ಕಡಿಮೆ ಬೀಳುವದರಿಂದಲೂ, ಸ್ವಾತಂತ್ರ್ಯದೊರೆತ ನಂತರ ಸರಕಾರವು ಜನಹಿತದ ಹಲವು ಕಾರ್ಯಗಳನ್ನು ಕೈಕೊಂಡು ಆಡಳಿತ ಖರ್ಚು ಹೆಚ್ಚುತ್ತಿರುವದರಿಂದಲೂ ಅದನ್ನು ಸರಿಗಟ್ಟಲು ಜನರು ತಪ್ಪಿ ಭಾಗದ ಜವಾಬ್ದಾರಿಯನ್ನಾದರೂ ಸ್ವಲ್ಪ ಹೊರೆಯನ್ನು ವಹಿಸಿಕೊಳ್ಳುವದು ಯುಕ್ತವೆಂತಲೂ, ಉಳುವರಿ ಇರುವ ಹಣವನ್ನು ಸರಕಾರದ ಭವಿಷ್ಯತಿಯ ದೃಷ್ಟಿಯಿಂದ ಪೂರ್ತಿ ಖರ್ಚು ಮಾಡುವದು ಸರಿಯಲ್ಲವೆಂತಲೂ, ಅಲ್ಲದೆ ಈ ಉಳುವರಿಯ ಹೆಚ್ಚಿನ ಭಾಗವು ದೇಶದ ಅಭಿವೃದ್ಧಿಗಾಗಿ ಕೈಕೊಳ್ಳಬೇಕಾದ ಯುದ್ಧೋತ್ತರ ಯೋಜನೆಗಳಿಗೆ ವಿನಿಯೋಗಿಸಲ್ಪಟ್ಟರುವದರಿಂದಲೂ, ಇಂಡಿಯಾ ಸರಕಾರದವರು ಕೊಟ್ಟಿರುವ ತಾತ್ಕಾಲಿಕ ತೀರ್ಮಾನದಂತೆ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಯೇ ಇಟ್ಟುಕೊಂಡು ಜವಾಬ್ದಾರಿ ಸರಕಾರವನ್ನು ಪಡೆಯಲು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವದು ಅತ್ಯವಶ್ಯವೆಂತಲೂ ಸರಕಾರದ ಆದಾಯವನ್ನು ಹೆಚ್ಚಿಸುವ ಈ ಮಸೂದೆಯ ತತ್ವಕ್ಕೆ ವಿರೋಧಿಸುವರು ಕುರಿಯಲ್ಲವೆಂತಲೂ ಅದರ ಮಸೂದೆಯಲ್ಲಿ ಸೂಚಿಸಿರುವ ಕಂದಾಯ ದರವು ತೀರಾ ಕೆಳಗೆಯನ್ನು ಕೊಡುವವರ ಶಕ್ತಿಗೆ ವಿಮರ್ಶನವಾದುದೆಂದು ಇದನ್ನು ಜನಾಭಿಪ್ರಾಯ ತೆಗೆದು ಯೋಗ್ಯ ರೀತಿ ಇಳಿಸಲು ಒಂದು ಸಿಲೆಕ್ಟ್ ಕಮಿಟಿಗೆ ಬಿಡುವದು ಸೂಕ್ತವೆಂತಲೂ ನುತ್ತೊಂದು ಪಕ್ಷದವರು ಅಭಿಪ್ರಾಯಪಟ್ಟರು.

ಈ ಅಭಿಪ್ರಾಯದಂತೆಯೇ ಕೌನ್ಸಿಲಿನ ತೀರ್ಮಾನವೂ ಕೂಡ ಆಯಿತು. ದೇಶದ ಮುಂದಿನ ಹಿತದೃಷ್ಟಿಯಿಂದ ಈ ತೀರ್ಮಾನವು ಯುಕ್ತವಾದುದೆಂಬುದರಲ್ಲಿ ಸಂಶಯವಿಲ್ಲ. ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಬಹುಮತದವರು ಈ ಮೊದಲೇ ಹೋರಾಡಿ ತಾತ್ಕಾಲಿಕ ತಮ್ಮ ಉದ್ದಿಶ್ಯವನ್ನು ಸಾಧಿಸಿರುವ ಈ ಸಮಯದಲ್ಲಿ ಇದನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವದು ಅವಶ್ಯವಾಗಿದೆ. ಅನುಕೂಲಸ್ಥರಿಗೆ ಮಾತ್ರ ಹೆಚ್ಚಿನ ತೆರಿಗೆ ಸಂಗ್ರಹಿಸುವ ವ್ಯವಸಾಯ ಆದಾಯ ತೆರಿಗೆಯು ಮಸೂದೆಯನ್ನು ಕೌನ್ಸಿಲಿನಲ್ಲಿರುವ ಪ್ರತಿನಿಧಿಗಳು ಈ ಮೊದಲೇ ಚರ್ಚೆಗೆ ಬಂದಿದ್ದಾಗ್ಗೆ ಪಾಸುಮಾಡಿದ್ದರೆ ಈ ಸಮರಿ ಕಂದಾಯದ ಮಸೂದೆಯನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಬೀಳುತ್ತಿರಲಿಲ್ಲ. ಇನ್ನಾದರೂ ಕೂಡ ಬರುವ ಮಾರ್ಚಿ ಕೌನ್ಸಿಲ್ ವಿಂಟರ್‌ಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ಪಾಸು ಮಾಡಿದ್ದಾದರೆ ಈ ಮಸೂದೆಯನ್ನು ವಜಾ ಮಾಡುವಂತೆ ಸರಕಾರವನ್ನು ಕೇಳಿಕೊಳ್ಳಬಹುದಾಗಿದೆ.

ಒಂದು ವೇಳೆ ಈ ಮಸೂದೆಯನ್ನು ಕೌನ್ಸಿಲಿನ ಬಹುಮತದವರು ತಿರಸ್ಕರಿಸಿದ್ದರೆ ಇಂಡಿಯಾ ಸರಕಾರದವರು ಇದನ್ನು ಸರ್ಟಿಫೈ ಮಾಡಿ ಜಾರಿಗೆ ತರುವಂಥಾ ವೇಳೆಯಲ್ಲಿ ಅದರಲ್ಲಿ ಸೂಚಿಸಿರುವ ಹೆಚ್ಚಿನ ದರವೇ ಜನರ ಮೇಲೆ ಹೊರಿಸಲ್ಪಡುತಿತ್ತು. ಆದರೆ ಬಜೆಟು ಈಗ ಆಗಿನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಟ್ಟಿರುವದರಿಂದ ಜನರ ಪಲಹೆಯಂತೆ ದರವನ್ನು ಕಡಿಮೆ ಮಾಡಿಕೊಳ್ಳುವಂಥಾ ಮತ್ತು ಬಡವರನ್ನು ಹೆಚ್ಚಿನ ತೆರಿಗೆಯಿಂದ ವಿನಾಯಿತಿಮಾಡುವಂಥಾ ಅವಕಾಶವು ಜನರ ಪ್ರತಿನಿಧಿಗಳಿಗೆ ದೊರೆತಿದೆ. ಸರಕಾರದ ಕಾರ್ಯಕಲಾಪಗಳು ವಿಸ್ತರಿಸುತ್ತಾ ಬರುತ್ತಿರುವ ಈ ಸಮಯದಲ್ಲಿ ಸರಕಾರದ ಆದಾಯವನ್ನು ಹೆಚ್ಚಿಸುವ ಪ್ರತಿಯೊಂದು ಮಸೂದೆಗೂ ವಿರೋಧಿಸುತ್ತಾ ಬಂದುದಾದರೆ ಶೀಘ್ರವಾಗಿಯೇ ಈ ಪ್ರಾಂತವನ್ನು ಬೇರೆ ಪ್ರಾಂತದೊಡನೆ ಸಂಯೋಜನೆ ಮಾಡಲು ಸಹಾಯಮಾಡಿದಂತಾಗುವುದರಲ್ಲಿ ಸಂಶಯವಿಲ್ಲ. ಜವಾಬ್ದಾರಿ ಸರಕಾರವು ಬೇಕೆನ್ನುವ ವ್ಯಕ್ತಿಯು ಅಂಥಾ ಸರಕಾರವು ನನ್ನು ಕೈಗೂಡುತ್ತಿರುವಂಥಾ ಈ ಸಮಯದಲ್ಲಿ ತನ್ನ ಕರ್ತವ್ಯವನ್ನರಿತು ಕೊಂಡು ಸರಕಾರದ ಆದಾಯವನ್ನು ಹೆಚ್ಚಿಸಲು ನೂಡುತ್ತಿರುವ ಜನರ ಪಾವತಿ ತಕ್ಕೆಗೆ ವಿರೋಧವಾದ ಈ ಸ್ವಯತ್ನಕ್ಕೆ ತನ್ನ ಬೆಂಬಲವನ್ನು ಕೊಡುವನೆಂಬುದು ದೇಶದ ಉದ್ದಗಲಕ್ಕೂ ಈ ಮೊದಲು ನಡೆದ ಹಲವು ಪಾರ್ವಜನಿಕ ಸಭೆಗಳ ತೀರ್ಮಾನಗಳಿಂದ ಸ್ಪಷ್ಟವಾಗಿದೆ. ಅದರಂತೆ ದೇಶೀಯರು ಕೌನ್ಸಿಲಿನಲ್ಲಾದ ಈ ನಿರ್ಣಯಕ್ಕೆ ಬೆಂಬಲವಿತ್ತು ಜನಹಿತ ಸರಕಾರ ನಡೆಯಲು ಅನುಮಾಡುವರಾಗಿ ಎಂಬಲಾಗಿದೆ.

ವರ್ತಮಾನ.

ತಾ. ೨೮–೧–೫೦ ರಲ್ಲಿ ಕೊಡಗು ಜಿಲ್ಲಾ ಗ್ರಾಮೀಣ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಕೊಡಗಿನ ಚೀಫ್ ಕಮಿಷನರ್ ಶ್ರೀ. ಸಿ. ಟಿ. ಮೊದಲಿಯಾರವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾ. ೨೮–೧–೫೦ ರಲ್ಲಿ ಕೊಡಗಿನ ಚೀಫ್ ಕಮಿಷನರ್ ಶ್ರೀ. ಸಿ. ಟಿ. ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆ ಹೈಸ್ಕೂಲ್ ಹಾಲ್‌ನಲ್ಲಿ ಕೊಡಗಿನ ಬಾಲಚಮೂ ದಳದ ಮಹಾಸಭೆಯು ನಡೆದಾಗ, ಡೆಲ್ಲಿಯಲ್ಲಿರುವ ಆ ದಳದ ಕೇಂದ್ರ ಸಮಿತಿಯು ಕೊಡಗಿನಲ್ಲಿ ಆ ಚಿಗ್ಗೆ ಶ್ರಮವಹಿಸಿ ದುಡಿಯುತ್ತಿರುವ ಶ್ರೀ. ಕಲ್ಯಾಟಂಡ ಬೆಳ್ಯಪ್ಪನವರಿಗೆ ಕಳಹಿಸಿದ 'ಮೆರಿಟ್ ಮೆಡಲ'ನ್ನು ಕೊಡಲಾಯಿತು.

ಮದ್ರಾಸ್ ಪ್ರಾಂತೀಯ ಒಲಂಪಿಕ್ ಆಟೋಟಗಳಲ್ಲಿ ಶ್ರೀ. ಕೋದಂಡ ಎ. ಪೂವಯ್ಯನವರು ಭಾರದ ಕಲ್ಲೆಸೆಯುವದರಲ್ಲಿ ಆ ವರೆಗಿನ ಮದ್ರಾಸ್ ರೆಕಾರ್ಡನ್ನು ವಿಜಯ ಪಥವು ಬಹುಮೂನ ಪಡೆದರು. ಇವರನ್ನು ಮದ್ರಾಸಿನ ಪರ ಅಖಿಲ ಭಾರತ ಒಲಂಪಿಕೆಗೆ ಕಳುಹಿಸುವರೆಂದು ತಿಳಿಯಬಂದಿದೆ.

ತಾ. ೧೫–೧–೫೦ ರಲ್ಲಿ ಪೂನಾದಲ್ಲಿರುವ ಕೊಡವ ಸಂಘವು ಹುತ್ತರಿ ಹಬ್ಬವನ್ನು ಶ್ರೀ. ಮುಕ್ಕಾಟಿರ ಮುತ್ತಣ್ಣನವರ ಭವನದಲ್ಲಿ ನಡೆಸಿತು. ಸಂಘದ ವಾರ್ಷಿಕ ಸಭೆಯಲ್ಲಿ ಶ್ರೀ. ಪಾರುವಂಗಡ ಬೋಪಣ್ಣ (ಅಧ್ಯಕ್ಷ) ಶ್ರೀಮತಿ ಕೊಡಂದೆರ ನಿರ್ಮಲ ಐಯ್ಯಪ್ಪ (ಕಾರ್ಯದರ್ಶಿ) ಶ್ರೀ. ಕೇತಿಯಂಡ ದೇವಯ್ಯ (ಖಜಾಂಚಿ) ಇವರುಗಳನ್ನು ಸಂಘದ ಕಾರ್ಯನಿರ್ವಾಹಕರಾಗಿ ಆರಿಸಲಾಯಿತು.

ತಾ. ೧೭–೧–೧೯೫೦ ರಲ್ಲಿ ಮರಗೋಡು ಗ್ರಾಮದ ಕಾಂಗಿರ ಗಣಪತಿಯವರು ೨೦೦ ಒಟ್ಟೆ ಭೂಮಿಯು ಮೆದೆಗೆ ಬೆಂಕಿಬಿದ್ದು ಮೆದೆಯೂ ಹತ್ತಿರದ ಹುಲ್ಲಿನ ಮನೆಯೂ ಬೆಂದುಹೋಗಿ ಸುಮಾರು ೩೦೦೦ ರೂಪಾಯಿಗಳ ನಷ್ಟವಾಗಿದೆಯಂತೆ.

ಕಳೆದ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀ. ಐಚೆಟ್ಟಿರ ಮುತ್ತಣ್ಣನವರೂ, ಶ್ರೀ. ಎಸ್. ಡಿ. ದಾಮಪ್ಪನವರೂ ತೇರ್ಗಡೆಯಾಗಿರುವರು.

ತಾ. ೨೫–೧–೫೦ರ ಸಾಯಂಕಾಲ ವಿರಾಜಪೇಟೆ ರಾಜಾಸೀಟ್ ವೈದಾನದಲ್ಲಿ ಕೊಡಗು ಸರಕಾರದ 'ಸ್ಟೇಟ್ ಬೆಂಜ್ಮೆಟ್' ಏರ್ಪಾಡನ್ನು ನಿರೋಧಿಸಿ ಒಂದು ಸಾರ್ವಜನಿಕ ಸಭೆಯು ಶ್ರೀ. ಬಿ. ಪದ್ಮನಾಭರವರ ಅಧ್ಯಕ್ಷತೆಯಲ್ಲಿ ನಡೆದು ತಮ್ಮ ನಿಶೇಧ ತೀರಾವನ್ನು ಚೀಫ್ ಕಮಿಷನರಿಗೂ ಕೇಂದ್ರ ಸರಕಾರಕ್ಕೂ ತಿಳಿಸಿದರು.

ಸಾಂಪೋಷ್ಣ ಸರಕಾರಿ ಪ್ರೌಢ ಶಾಲೆಯ ವಾರ್ಷಿಕೋತ್ಸವವು ತಾ. ೪–೨–೫೦ ರಲ್ಲಿ ಮೈಸೂರು ಮಹಾರಾಜಕಾಲೇಜಿನ ಇಂಗ್ಲಿಷ್ ಪ್ರೊಫೆಸರರಾದ ಶ್ರೀ. ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವದು.

ತಾ ೩೧–೧–೫೦ರ ಬೆಳಿಗೆ ಕೌನ್ಸಿಲು ಸಭೆಯು ಜರಗುವ ಮುನ್ನ 'ಹೊಸ ಕಂದಾಯ ಮಸೂದೆಗೆ ಧಿಕ್ಕಾರ'ವೆಂಬ ಘೋಷಣೆಯಿಂದ ಕೊಡಗಿನ ಕೆಲವು ಭಾಗದ ಸುಮಾರು ೩೦೦ ಜನರೆ ತಮ್ಮ ನಿಶೇಧ ಪ್ರದರ್ಶನವನ್ನು ಕೋಟೆಯು ಮುಂಭಾಗದಲ್ಲಿ ನೂಡಿ ಚೀಫ್ ಕಮಿಷನ್ನರು ಬಂದಾಗ ಅವರಿಗೆ ಕಂದಾಯ ಹೆಚ್ಚು ಮಾಡಕೂಡದೆಂಬ ಅರ್ಜಿಗಳನ್ನು ಆರ್ಪಿಸಿದರು.

ಕೊಡಗಿನ ಚೀಫ್ ಕಮಿಷನರಾದ ಶ್ರೀ. ಸಿ. ಟಿ. ಮೊದಲಿಯಾರರು ಬರುವ ಮೂರ್ಚಿ ತಿಂಗಳಲ್ಲಿ ಕೆಲಸದಿಂದ ನಿವೃತ್ತರಾಗುವರೆಂದೂ ಅವರ ಬದಲು ಆಸ್ಟ್ರೇಲಿಯಾದಲ್ಲಿ ಹೈಕಮಿಷನರಾಗಿದ್ದ ಕರ್ನಲ್ ಪಯೊಷಿಂಗ್ ಬೇಡಿಯವರು ಬರುವರೆಂದೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ರಜೆಯಲ್ಲಿರುವ ದಕ್ಷಿಣ ಕೊಡಗು ಸುಬೇದಾರರಾದ ಶ್ರೀ. ತಾಣಮಂಡ ಉತ್ತಯ್ಯನವರ ಬದಲು ಅಬ್ಕಾರಿ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಎಂ. ಶ್ರೀನಿವಾಸರಾಯರನ್ನೂ ಅವರ ಬದಲು ಟೆಂಬರ್ ಸುಬೇದಾರರಾಗಿದ್ದ ಶ್ರೀ. ಗುಡ್ಡಂಡ ಕಾರ್ಯಪ್ಪನವರನ್ನೂ ನೇಮಿಸಲಾಗಿದೆ.

ಕೊಡಗು ಪ್ರಾಂತೀಯ ದನಗಳ ಪ್ರದರ್ಶನವು ಫೆಬ್ರವರಿ ತಾರೀಕು ೨೪ನೇ ಶುಕ್ರವಾರ ನಡೆಯುವುದಾಗಿಯೂ ಪದರಿ ದಿನ ಕೊಡಗಿನಲ್ಲಿ ಉತ್ಪತ್ತಿಯಾಗುವ ಎಲ್ಲಾ ತರದ ಹಣ್ಣು ಹಂಪಲು, ಗೆಡ್ಡೆಗೆಣಸು ಮತ್ತು ಬೆಳೆಗಳ ಪ್ರದರ್ಶನವು ಕೂಡ ನಡೆಯುವುದಾಗಿಯೂ ಪ್ರದರ್ಶಿಸಲ್ಪಡುವ ಉತ್ತಮ ವಸ್ತುಗಳಿಗೆ ಬಹುಮಾನಗಳನ್ನು ಕೊಡಲಾಗುವುದೆಂದೂ ಕೊಡಗು ವ್ಯವಸಾಯ ಇಲಾಖಾ ಆಫೀಸರು ತಿಳಿಸುತ್ತಾರೆ.

೨೬–೧–೫೦ ರಲ್ಲಿ ಬಿಟ್ಟಂಗಾಲದ ಗ್ರಾಮವಾಸಿಗಳೆಲ್ಲರೂ ಸೇರಿ ರಿಪಬ್ಲಿಕ್ ದಿನದ ಉತ್ಸವವನ್ನು ಶ್ರೀ. ನಾಯಕಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಸಿದರು.

ರಿಪಬ್ಲಿಕ್ ದಿನಾಚರಣೆಯು ತೂಚಮಕೇರಿಯಲ್ಲಿ ಶ್ರೀ ಕಳ್ಳಿಚಂಡ ತಿಮ್ಮಯ್ಯನವರ, ಕಕ್ಕೆಬೆಯಲ್ಲಿ ಶ್ರೀ ಉದಿಯೊಂಡ ಮಾಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸರ್ವೋದಯ ದಿನಾಚರಣೆಯನ್ನು ತಾರೀಕು ೩೦ ರಲ್ಲಿ ಪಾಡಿನಾಡಿನ ಮಹನೀಯರಾದ ಶ್ರೀ ಎನ್. ಬಿ. ನಂಜುಂಡನವರ ಅಧ್ಯಕ್ಷತೆಯಲ್ಲಿ ಸೇರಿ ಬಾಪೂರವರ ಅವಿರಾಜೀವನವನ್ನು ಸ್ಮರಿಸಿದರು.

ತಾ. ೧–೨–೫೦ ರಲ್ಲಿ ಗೋಣಿಕೊಪ್ಪಲಿನ ಸೂರ್ಯೋದಯ ರೈಸ್ ಮಿಲ್ಲಿನ ಪ್ರಾರಂಭೋತ್ಸವವು ಆ. ಕವಿಷನರಾದ ಶ್ರೀ ಎಸ್. ಸಿ. ಸುಬ್ಬಯ್ಯನವರಿಂದ ನಡೆಯಿತು.

ಮೊನ್ನೆ ಕೌನ್ಸಿಲ್ ವಿಂಟರಿಂಗಿನಲ್ಲಿ ಚರ್ಚಿಸಿದ ಕಂದಾಯ ಏರಿಸುವ ಮಸೂದೆಯಲ್ಲಿ "ಭೂಕಂದಾಯವನ್ನು ಎಂಡರಷ್ಟು ಏರಿಸಬೇಕು" ಎಂಬುದರ ಬದಲು "ಜಮ್ಮ ಕಂದಾಯವನ್ನು ಎಳಡರಷ್ಟು ಏರಿಸಬೇಕು" ಎಂಬ ಉಪ ಸೂಚನೆಯನ್ನು ಶ್ರೀ ಸಿ. ಎಂ. ಪೂಣಚ್ಚನವರು ಕಳುಹಿಸಿದ್ದರೆಂದೂ ಆದರೆ ಇದಕ್ಕೆ ಇಂಡಿಯಾ ಸರಕಾರದ ಅನುಮತಿ ಪ್ರೊವಿಯಲ್ಲಿಲ್ಲವೆಂದೂ ತಿಳಿದು ಬರುತ್ತದೆ.

'ಸರ್ವೋದಯ' ದಿನಾಚರಣೆ (ಗಾಂಧೀಜಿಯವರ ಪುಣ್ಯ ದಿನ) ಯು ತಾ. ೩೦ ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ವಿದ್ಯಾರ್ಥಿಗಳು ಬೆಳಿಗ್ಗೆ ರಾಮಭಜನೆಯಿಂದ ಮೆರವಣಿಗೆಯು ನಂತರ ಡಾ. ಆಶ್ರಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿಯವರ ಗುಣಗಾನಮಾಡಿದರು. ಮಧ್ಯಾಹ್ನದ ವೇಳೆ ಸಾರ್ವಜನಿಕರು ಮೆರವಣಿಗೆಯು ನಂತರ ಶ್ರೀ ಬಿ. ಎಂ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿಯವರ ಶುಭ ಜೀವನವನ್ನು ಸ್ಮರಿಸಿದರು.

ಕೊಡಗು ಆಹಾರ ಸಲಹಾ ಸಮಿತಿಯ ಮಿಟಿಂಗು ತಾ. ೧೦ ರಲ್ಲಿ ಕೊಡಗು ಕೌನ್ಸಿಲು ಹಾಲಿನಲ್ಲಿ ನಡೆಯುವದು.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್. ಜಾ|| ಎಂ. ಎ. ಜಿನ್ನಾ.

Transacts:—Life, Fire, Motor and Marine.

ನಮ್ಮ ಹೊಸ ಪಿಸ್ಸಾರ್ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಿಂ. ಯಿ ಅಚ್ಚಣ್ಣ,
ಏಜೆನ್ಸಿ ಮ್ಯಾನೇಜಿಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಕಾವೇರಿಕಟ್ಟಾ, ಮಂಗಳೂರು.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯು ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ. .... 6,13.00,000 ಮೊದಲಿ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73.00.000 ,,
ಒಟ್ಟು ನಿಧಿ ರೂ. .... 8,30.00,000 ,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೊದಲಿತ್ತಿಪ್ಪಿ ಕಡೆಪ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ದಿ ಮೈಸೂರು ಫೈರ್ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್.

ಫೈರ್ ಎಷ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಶಾಖಾ ಕಛೇರಿ:
ಮಂಸ್ಟರ್ ಹೌಸ್, ಹಾರ್ನಬಿ. ಪಿಸ್ಕಿಕ್ಟ್ ಬೋರ್ಡ್ ಬಿಲ್ಡಿಂಗ್,
ರೋಡ್, ಫೋರ್ಟ್, ಬೊಂಬಾಯಿ. ಬೆಂಗಳೂರು ಕಂಟೋನ್‌ಮೆಂಟ್, ಬೆಂಗಳೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫ್ರೇಜರ್‌ಪೇಟೆ.
ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಕ್ಕೆ ಬಿಸ್ಕತ್ತು ಮುಂತಾದವುಗಳ ಕೊಡುಗೆದಾರರ ಮೂಲಕ ಪ್ರತಿ ಭಾನುವಾರ ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ

ಸೀಮಕವಾಗಿ ಏಜೆಂಟರುಗಳು ಕಂಪೆನಿಯಿಂದ ಹೊತ್ತಾದ ಪೆಟ್ಟಿಗೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 32-9-49.

ಟಿ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಕ ಸಹಕಾರಿ, ಪೂರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. .32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. .32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4–10–0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–24

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.* or The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ ರೂ. 10,00,000.
ವಸೂಲಾದ ಶೇರು ಮೊಬಲಗು ರೂ. 1,79,000.
ಕ್ಷೇಮನಿಧಿ ರೂ. 53,000.

ಈ ಬ್ಯಾಂಕಿನಿಂದ ಬೆಟ್ಟಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲಾಗುವದಲ್ಲದೆ ಜನ್ನ, ಬೆಳ್ಳಿ ನಗಗಳ ಊಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೇಡಿ ಮತ್ತು ಬಾರ್ಡಾಸ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೋದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಬಿ. ಸಿ. ಅಚ್ಚಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

ಓದುಗರ ಓಲೆಗಳು.

ಸ್ಟೇಟ್ ಬೇಂಕ್ವೆಟ್ ಪ್ರತಿಧ್ವನಿ.

ತಾರೀಕು ೨೬ರಲ್ಲಿ ಸರಕಾರಿ ಔತಣವನ್ನು ನಿಶೇಧಿಸಿ ಸಾರ್ವಜನಿಕರು ಬೇರೊಂದು ಔತಣವನ್ನು ಏರ್ಪಡಿಸಿದ್ದರೆಂದೂ ಆ ಸಮಾರಂಭದಲ್ಲಿ ಸರಕಾರಿ ಔತಣಕ್ಕೆ ಹೋದ ಕೆಲವರು ಹಿಂತಿರುಗುತ್ತಿದ್ದಾಗ್ಗೆ ಅವರ ಮೇಲೆ ಉಗಿಳಿಯೂ, ಅವರನ್ನು ಜರೆದೂ ಅಪಮಾನಿಸಿದರೆಂದೂ, ತಿಳಿದು ಬಂದಿದೆ. ಇದು ಸಹಜವಾದರೆ ಇಂಥಾ ವೃತ್ತಿಯನ್ನು ಎಷ್ಟು ಖಂಡಿಸಿದರೂ ಸಾಲದು. ಈ ಔತಣವನ್ನು ಏರ್ಪಡಿಸಿದವರು ಶಿಸ್ತು ವಿಾರಿದಂತೆ ನೋಡಿಕೊಳ್ಳಬೇಕಿತ್ತು. ಸೇರಿದವರೂ ಕೂಡ ಬೇಜವಾಬ್ದಾರಿಯಿಂದ ವರ್ತಿಸದೆ ಜವಾಬ್ದಾರಿ ಪ್ರಜೆಗಳಂತೆ ವರ್ತಿಸಬೇಕಿತ್ತು. ಸರಕಾರಿ ಔತಣದಿಂದ ಬರುತ್ತಿದ್ದವರನ್ನು ತಡೆದಾಗ ಪೊಲೀಸರು ಎಚ್ಚರವಹಿಸಬೇಕಿತ್ತು. ಅದೂ ಪೊಲೀಸ್ ಕಚೇರಿಯ ಮುಂದೆಯೇ ಇದು ನಡೆದುದು. ಯಾವ ಅಗಲೀ ಸಾರ್ವಜನಿಕ ಸ್ಥಳದಲ್ಲಿ ಈ ರೀತಿಯ ಅವಮಾನ ಮಾಡಿದವರು ಶಿಕ್ಷಾರ್ಹರು. ಈ ರೀತಿಯ ಸಾರ್ವಜನಿಕ ಕೂಟಗಳನ್ನು ಏರ್ಪಡಿಸುವ ಮುಂದಾಳುಗಳು ಎಚ್ಚರದಿಂದ ಶಿಸ್ತುಗೆಡದಂತೆ ನೋಡಬೇಕು. ಅಂಥಾ ಸಂದರ್ಭಗಳಲ್ಲಿ ಪೊಲೀಸರೂ ಎಚ್ಚರದಿಂದಿರಬೇಕು. ಒಂದು ಕಡೆಯ ಬೇಜವಾಬ್ದಾರಿ, ಮತ್ತೊಂದು ಕಡೆಯ ಅನಾಸಕ್ತಿಯಿಂದಾಗಿ ಸಭ್ಯ ನಾಗರೀಕರಿಗೆ ಅವಮಾನವಾಯಿತು. ಇನ್ನಾದರೂ ಇಂಥಾದ್ದಕ್ಕೆ ಎಡೆಕೊಡದಂತೆ ಸಾರ್ವಜನಿಕರೂ, ಅಧಿಕಾರವರ್ಗವೂ ವರ್ತಿಸುವರೇ?

Timid

ಕುತ್ತುನಾಡು ಪಾಲ.

ನಮ್ಮ ಕುತ್ತುನಾಡು 'ಳೇಂದರೆಕಡು' ಹೊಳೆಗೆ ಒಂದು ಪಾಲವನ್ನು ಹಾಕಲಿಕ್ಕೆ ಹತ್ತು ಹದಿನೈದು ವರ್ಷಗಳಿಂದ ನಮ್ಮ ನಾಡಿನವರು ಳೇಳಿಕೊಂಡದ್ದು ಸರಿಯಷ್ಟೆ. ಒಂದು ಪಾಲ ಹಾಕಲಿಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಸಿದ್ಧರಿಲ್ಲವಂತೆ. ಅದನ್ನು ಡಿ. ಪಿ. ಡಬ್ಲ್ಯೂ ಇಲಾಖೆಯವರಿಗೆ ಕಳುಹಿಸಿದರಂತೆ. ಇನ್ನೂ ಎರಡು ಮೂರು ತಿಂಗಳುಗಳಲ್ಲಿ ಮಳೆಗಾಲ ಹಿಡಿಯುವ ಸಂಭವ ಆಗುತ್ತೆ. ಆದುದರಿಂದ ನಾವು ಸೆಕ್ಷನ್ ಆಫೀಸರವರನ್ನು ಕೇಳಿದಾಗ ಅವರು ಇಲ್ಲದ ಸಲ್ಲದ ನೆಪವನ್ನು ಕೊಟ್ಟು ನಮಗಳಿಗೆ ಯಾವುದೊಂದು ಸಾಕಷ್ಟು ಮಾಹಿತಿಗಳನ್ನು ಮಾಡಿಕೊಡುವುದಾಗಿ ತೋರುವುದಿಲ್ಲ. 1949ನೇ ಇಸವಿ ಆಗಸ್ಟ್ ತಿಂಗಳಲ್ಲಿ ಕೊಡಗಿನ ಚೀಫ್ ಕಮಿಷನರವರು ಮಳೆಗಾಲ ಜೋರಾಗಿ ನಮ್ಮ ನಾಡಿನವರ ಗದ್ದೆ ತೆನರಿಗಳೆಲ್ಲ ಒಡೆದು ಹೋದಾಗ ಅದನ್ನು ಅಜಮಾಯಿಸಲಿಕ್ಕೆ ಇದೇ ಹೊಳೆಗಾಗಿ ಅನೆ ಬೆನ್ನಿನ ಮೇಲೆ ಬಂದು ನಮಗೆ ಬೇಕಾದ ಸೌಕರ್ಯಗಳನ್ನು ಕೊಡುತ್ತೇನೆಂದು ಹೇಳಿದರು. ಈ ವರೆಗೂ ನಮಗೆ ಯಾವುದೊಂದು ಸೌಕರ್ಯಗಳು ಸಿಕ್ಕಿರುವುದಿಲ್ಲ. ಮಳೆಗಾಲದಲ್ಲಿ ನಮ್ಮ ನಾಡು ಅಂಡಮಾನ್ ದ್ವೀಪದ ಹಾಗಿದೆ. ನಾವುಗಳು ಸರಕಾರಕ್ಕೆ ಕಂದಾಯ ಕೊಡುವುದಿಲ್ಲವೆ? ಈ ಹೊಳೆಗೊಂದು ಪಾಲಮಾಡಿಕೊಡಲು ಸರಕಾರಕ್ಕೆ ಶಕ್ತಿ ಸಾಲದು? ಆ ಪಾಲಕ್ಕಾಗಿ ಸಾಧಾರಣ ಇನ್ನೂರು ಮುನ್ನೂರು ಜನರು ದಾಟುವರು ಅಲ್ಲದೆ ನಮ್ಮ ನಾಡಿನ ಮಕ್ಕಳು ಪೊನ್ನಂಪೇಟೆ ಹೈಸ್ಕೂಲಿಗೆ ಹೋಗಲಿಕ್ಕೆ ಎರಡು ಮೂರು ತಿಂಗಳು ಕಷ್ಟಪಡಬೇಕಾಗುವುದು. ಆದ್ದರಿಂದ ಸರಕಾರವು ರೈತರ ಮೇಲೆ ದಯೆತೋರಿ ಆದಷ್ಟು ಬೇಗನೆ ಒಂದು ಪಾಲವನ್ನು ಮಾಡಿಕೊಡಬೇಕಾಗಿ ಆರಿಕೆ.

ಕೆ. ಎ. ಐಯ್ಯಪ್ಪ.

ಗುಟ್ಟು ರಟ್ಟಾದುದು.

ಸಂಯೋಜನಾವಾದಿಗಳಲ್ಲಿ ಕೆಲವರು ಗುಟ್ಟಿನ ವಿೂಟಿಂಗೊಂದನ್ನು ಬಿಟ್ಟಂಗಾಲದಲ್ಲಿ ತಾ. ೨೭-೧-೫೦ನೇ ಶುಕ್ರವಾರ ನಡಿಸಲು ೨೬-೧-೫೦ರಲ್ಲು ನೋಟೀಸುಗಳನ್ನು ಅಚ್ಚು ಹಾಕಿಸಿ ಅದೇ ನಾಯಂಕಾಲ ಕಲ್ಲೋಡು ಶಾಲೆಯಲ್ಲಿ ನಡೆದ ರಿಪಬ್ಲಿಕ್ ಉತ್ಸವದಲ್ಲಿ ತಮಗೆ ಬೇಕಾದವರಿಗೆ ಹಂಚಿದರು. ನೋಟೀಸುಗಳಲ್ಲಿ ಕನ್ವೀನರುಗಳಾಗಿದ್ದವರು, ಮೇ|| ಗಳಾದ ಕುಪ್ಪಂಡ ಬೊಳ್ಳಪ್ಪನವರು, ಕೊಂಗಾಂಡ ಕಾಳಪ್ಪನವರು, ಬಿಟ್ಟಂಗಾಲ ಪೋಸ್ಟ ಆಫೀಸಿನಲ್ಲಿ ಪೋಸ್ಟು ಮಾಸ್ಟರಾದ ಬೊಪ್ಪಂಡ ಕುಶಾಲಪ್ಪನವರು, ಬಾಳುಗೋಡು ಗ್ರಾಮದ ಪಟೇಲರಾದ ಮೂಜೆಟ್ಟಿರ ಕುಟ್ಟಪ್ಪನವರು ಮತ್ತು ಬಿಟ್ಟಂಗಾಲ ಗ್ರಾಮದ ಪಟೇಲರಾದ ಮೂತಂಡ ಐಯಪ್ಪನವರು.

ಹೇಗೋ ಒಂದೆರಡು ನೋಟೀಸುಗಳು ಪ್ರತ್ಯೇಕವಾದಿಗಳ ಕೈಗೆ ದೊರಕಿದ್ದುದರಿಂದ ಬಿಟ್ಟಂಗಾಲದ ಸುತ್ತ ಮುತ್ತಲಿರುವ ಐದಾರು ಗ್ರಾಮಗಳಿಂದ ಜನರು ವಿೂಟಿಂಗಿಗೆ ಹಾಜರಾದರು. ಸುಮಾರು ೧೫೫ ಜನರು ಸೇರಿದ್ದರು. ಈ ಗ್ರಾಮ ಸ್ಥರಿಗೇನೇ ಸರಿಯಾಗಿ ನೋಟೀಸು ಹಂಚದೆ ಇಪ್ಪತ್ತನಾಲ್ಕು ಗಂಟೆಯೊಳಗೆ ನಡೆಸಿದ ಈ ವಿೂಟಿಂಗಿಗೆ ಸಂಯೋಜನಾವಾದಿಗಳ ಪರ ವಾದಿಸಲು ಗೋಣಿಕೊಪ್ಪಲಿಂದ ಐದಾರು ಮಹನೀಯರು ಬಂದಿದ್ದರು. ಸುತ್ತಮುತ್ತಲಿನ ಗ್ರಾಮಸ್ಥರಿಗೆ ನೋಟೀಸು ದೊರಕದಿರುವಲ್ಲಿ ಗೋಣಿಕೊಪ್ಪದವರಿಗೆ ದೊರೆತು ಹಾಜರಾದದ್ದು ಆಶ್ಚರ್ಯವೇ ಸರಿ.

೨ ಗಂಟೆಗೆ ಇಟ್ಟ ವಿೂಟಿಂಗನ್ನು ಗೋಣಿಕೊಪ್ಪಲಿಂದ ಬರುವವರ ಅನುಕೂಲಕ್ಕಾಗಿ ಕನ್ವೀನರ ಮುಖಂಡರಾದ ಪೋಸ್ಟು ಮಾಸ್ಟರೂ ನಮ್ಮ ನಾಡಿನ ಕೌನ್ಸಿಲ್ ಮೆಂಬರರೂ ಆದ ಶ್ರೀ ಕೆ. ಕೆ. ಬೆಳ್ಯಪ್ಪನವರೂ ಸಮಯವನ್ನು ನೂಕಿ 2¾ ಗಂಟೆಗೆ ಇಟ್ಟರು. ಸಭೆ ಸೇರಿ ಅಧ್ಯಕ್ಷರನ್ನು ಜುನಾಯಿಸುವ ಕಾಲಕ್ಕೆ ಕನ್ವೀನರಲ್ಲಿ ಒಬ್ಬರಾದ ಮೂತಂಡ ಐಯಪ್ಪನವರು ತನ್ನನ್ನು ಕೇಳದೆ ಮೂಡಪೆ ತನ್ನ ಅಭಿಪ್ರಾಯವನ್ನು ಅರಿಯದೆ ತನ್ನನ್ನು ಕನ್ವೀನರಾಗಿ ಸೇರಿಸಿಕೊಂಡದ್ದು ನ್ಯಾಯವಲ್ಲ. ಒಪ್ಪುವುದೂ ಇಲ್ಲ. ತನ್ನ ಹೆಸರನ್ನು ರದ್ದು ಮೂಡಬೇಕೆಂದು ವಾದಿಸಿದರು. ಅಂತೆಯೇ ಗೈರಾಜರಾಗಿದ್ದ ಬಾಳುಗೋಡಿನ ಪಟೇಲರಾದ ಮೂಜೆಟ್ಟಿರ ಕುಟ್ಟಪ್ಪನವರು ಹೇಳಿ ಕಳುಹಿಸಿದ ಮಾತನ್ನು ಹಾಜರಿದ್ದವರೊಬ್ಬರು ವಿವರಿಸಿದರು. ಈ ರೀತಿಯ ಕೃತ್ರಿಮ ನೋಟೀಸನ್ನು ಹಂಚಲು ಕಾರಣವೇನೆಂದು ಪ್ರಶ್ನೆಗಳು ಬಂತು. ಕೌನ್ಸಿಲ್ ಮೆಂಬರಾದ ಮೇ. ಕಂಬೀರಂಡ ಬೆಳ್ಯಪ್ಪನವರು ಅದನ್ನು ದೊಡ್ಡ ತಪ್ಪೆಂದು ಎಣಿಸಬಾರದು. ಮಹತ್ವ ಕಾರ್ಯವಾಗಿರುವುದರಿಂದ ಗ್ರಾಮವಾರು ಹೆಸರು ಹಾಕಿ ನೋಟೀಸು ಹಂಚಿದ್ದು ನ್ಯಾಯವಾಗಿದೆ. ಈ ವಿಷಯ (ತನ್ನ ಚರ್ಚೆಗೆ ಅನುಕೂಲವಾಗುವದರಿಂದ) ತಪ್ಪೆಂದು ಎಣಿಸದೆ ಸಭೆಯನ್ನು ನಡಿಸುವ ಎಂದರು. ಶ್ರೀ ಚೇನಂಡ ಸೋಮಯ್ಯನವರು ಈ ರೀತಿ ಸಮಾಧಾನ ಕೊಟ್ಟರು. "ಕಳೆದ ಬುಧವಾರ ನಾನು ಮತ್ತು ಕಂಬೀರಂಡ ಬೆಳ್ಯಪ್ಪನವರು ಮತ್ತು ಮೂರು ನಾಲ್ಕು ಜನರು ಸೇರಿ ಇಂದು ವಿೂಟಿಂಗು ನಡಿಸಲು ಏರ್ಪಡಿಸಲಾಯಿತು. ನಾನೇ ಪ್ರಿಂಟು ಮಾಡಿಸಿ ಹಂಡಲು ಕೊಟ್ಟೆ. ಅಲ್ಲಿನ್ನಿದ್ದವರು ಹೇಳಿದಂತೆ ನಾನು ಕನ್ವೀನರ ಹೆಸರನ್ನು ಹಾಕಿದೆ. ಬಿಟ್ಟಂಗಾಲದಲ್ಲಿ ಈ ವಿಷಯು ತೀರ್ಮಾನಿಸುವದು ಅವಶ್ಯವೆಂದು ನಾವು ತಿಳಿಸಿದ್ದರಿಂದ ನೋಟೀಸು ಹಂಚಲಾಯಿತು. ಈ ರೀತಿ ಮಾಡಿದ್ದು ತಪ್ಪಾದರೆ ಇಂದು ಬಾಕಿ ಮಾಡಿ ಇನ್ನೊಂದು ದಿನ ಸೇರುವ" ಎಂದರು. ಏನೂ ತಿಳಿಯದ ಇಬ್ಬರ ಹೆಸರನ್ನು ಕನ್ವೀನರಾಗಿ ಸೇರಿಸಿಕೊಂಡದ್ದು ತಪ್ಪು. ಆದಕ್ಕಾಗಿ ಕ್ಷಮಾಪಣೆ ಬೇಡಬೇಕೆಂದು ಹೇಳಿದರು. ಅಂತೆಯೇ ಪೋಸ್ಟುಮಾಸ್ಟರಾದ ಕುಶಾಲಪ್ಪನವರು ಕ್ಷಮೆಯನ್ನು ಬೇಡಿದರು. ಹೇಗೂ ಸೇರಿರುತ್ತೇವೆ. ಕಂದಾಯ ಏರಿಸುವ ವಿಷಯವನ್ನು ಚರ್ಚಿಸಿ ತೀರ್ಮಾನಕ್ಕೆ ಬರುವ ಎಂದರು.

ನಾವು ಸೇರಿದವರು ತೀರ್ಮಾನಿಸಿದಂತೆ ನಮ್ಮ ನಾಡಿನ ಕೌನ್ಸಿಲು ಮೆಂಬರರು ಕೌನ್ಸಿಲಿನಲ್ಲಿ ಚರ್ಚಿಸುತ್ತೇವೆಂದು ಭರವಸೆ ಕೊಟ್ಟರೆ. ಈ ವಿಷಯ ಚರ್ಚಿಸಬಹುದು. ಇಲ್ಲವಾದರೆ ಪ್ರಯೋಜನವಿಲ್ಲ. ಆದ್ದರಿಂದ ಶ್ರೀ ಕೆ. ಬೆಳ್ಯಪ್ಪನವರ ಅಭಿಪ್ರಾಯಕ್ಕೊಡಬೇಕೆಂದು ಸಭೆಯ ಪರ ಶ್ರೀ ಎನ್. ಚಿಣಪ್ಪನವರು ಅವರನ್ನು ಕೇಳಿಕೊಂಡರು.

ಮೇ|| ಬೆಳ್ಯಪ್ಪನವರು ಭರವಸೆ ಕೊಡಲಾರೆನು ಎಂದು ಹೇಳಿ ಸಭೆಯಿಂದ ಹೊರಟು ಹೋದರು. ಅವರೊಡನೆ ಅವರ ಗೋಣಿಕೊಪ್ಪಲಿಂದ ಬಂದ ಸ್ನೇಹಿತರೂ ವಿರೋಧಿಸಿದ ಮೂರು ಕನ್ವೀನರೂ ಅವರ ಪ್ರೋತ್ಸಾಹಕರಾದ ಮೂವರೂ ಅಂತು ೭೨ ಜನರು ಸಭೆಯನ್ನು ಬಿಟ್ಟು ಹೋದರು.

ನಂತರ ಸಭೆಯವರು ಮೇ|| ನಾಯಂಡ ಪೊನ್ನಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು ಏರಿಸುವ ಕಂದಾಯದ ವಿಷಯ ದೀರ್ಘ ಚರ್ಚೆ ಮಾಡಿದರು. ಈ ಕೆಳಗಿನವರು ಚರ್ಚೆಯಲ್ಲಿ ಭಾಗ ವಹಿಸಿದರು. ಶ್ರೀಗಳಾದ ಕಾಳೆಂಗಡ ಚಿಣ್ಣಪ್ಪನವೆರು, ಬಲ್ಲಡಿಚಂಡ ಭೋಪಯ್ಯನವರು, ಪಟ್ಟಡ ಉತ್ತಯ್ಯನವರು, ನಾಯಂಡ ತಿಮ್ಮಯ್ಯನವರು, ಚೇಂಡಂಡ ಸೋಮಯ್ಯನವರು, ಮೂಚೆಟ್ಟಿರ ಮುತ್ತಣ್ಣನವರು, ಕೋದಾಂಡ ನಂಜಪ್ಪನವರು, ಕಂಜಿತಂಡ ಕುಶಾಲಪ್ಪನವರು, ನಾಯಂಡ ಬೆಳ್ಯಪ್ಪನವರು, ಸೋಮೆಯಂಡ ಅಚ್ಚಯ್ಯನವರು ಮತ್ತು ಎನ್. ಸಿ. ಚಿಣಪ್ಪನವರು.

ಆಂತ್ಯದಲ್ಲಿ ಮೇ|| ಕಾಳೇಂಗಡ ಚಿಣ್ಣಪ್ಪನವರು ಮಂಡಿಸಿದ ಈ ಕೆಳಗಿನ ಠರಾವುಗಳನ್ನು ಸರ್ವಸಮ್ಮತದಿಂದ ಮುಂಜೂರು ಮಾಡಲಾಯಿತು.

(೧) ಅವಧಿ ಮುಗಿದಿರುವ ಈಗಿನ ಕೌನ್ಸಿಲಿಗೆ ಹೊಸ ಚುನಾವಣೆಯನ್ನು ಶೀಘ್ರದಲ್ಲೇ ನಡಿಸಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

(೨) ಸಮುದಿ ಸೆಟ್ಲ್ಮೆಂಟಿನ ಮುಸೂದೆಯನ್ನು ಕೌನ್ಸಿಲಿನ ಹೊಸ ಚುನಾವಣೆಯಾಗುವವರೆಗೆ ಮುಂದರಿಸಿಡಬೇಕೆಂಯೂ ಇದು ಸಾಧ್ಯವಿಲ್ಲದಿದ್ದರೆ ಸದರಿ ಮುಸೂದೆಯನ್ನು ಸಿಲೆಕ್ಟ್ ಕಮಿಟಿಯ ಮೂಲಕ ದೇಶದ ಜನರ ಅಭಿಪ್ರಾಯ ತೆಗೆದು ಹೆಚ್ಚು ಕಡಿಮೆ ಮಾಡಬೇಕೆಂದೂ ಈ ಸಭೆಯು ಸರಕಾರವನ್ನು ಮತ್ತು ಕೌನ್ಸಿಲ್ ಸದಸ್ಯರನ್ನು ಕೇಳಿಕೊಳ್ಳುತ್ತದೆ

(ಸಿಲೆಕ್ಟ್ ಕಮಿಟಿಯ ಮೂಲಕ ದೇಶದ ಜನರ ಅಭಿಪ್ರಾಯ ತೆಗೆಸಿ ಹೆಚ್ಚು ಕಡಿಮೆ ಮಾಡಬೇಕೆಂಬ ಸೂಚನೆಯನ್ನು ಶ್ರೀ. ಚೇಂಡಂಡ ಸೋಮಯ್ಯನವರದಾಗಿದೆ.)

(೩) ಕೇಂದ್ರ ಪಾರ್ಲಿಮೆಂಟಿನಲ್ಲಿರುವ ಕೊಡಗಿನ ಪ್ರತಿನಿಧಿಯ ಮೇಲೆ ಇಲ್ಲಿನ ಜನರಿಗೆ ವಿಶ್ವಾಸವಿಲ್ಲದಿರುವುದರಿಂದಲೂ ಪ್ರಾಂತೀಕ ಕೌನ್ಸಿಲಿನಿಂದ ಮೆಂಬರು ಕೇಂದ್ರ ಪಾರ್ಲಿಮೆಂಟಿನ ಸದಸ್ಯನಾಗಿಕೂಡದೆಂದು ತಗ್ಗು ಪಡಿಯಾಗಿರುವುದರಿಂದಲೂ ಪಾರ್ಲಿಮೆಂಟಿಗೆ ಕೊಡಗಿನ ಪ್ರತಿನಿಧಿಯನ್ನು ಕೂಡಲೇ ಮುತವಾರಿಂದ ಸೀದಾ ಆರಿಸಬೇಕೆಂದೂ ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

ಅಧ್ಯಕ್ಷರ ಭಾಷಣದ ನಂತರ ಸಭೆಯನ್ನು ಭರಕಾಸ್ತು ಮಾಡಲಾಯಿತು.

ಹೀಗೆ ಗುಟ್ಟು ರಟ್ಟಾಗಿ ವಿೂಟಿಂಗಿನಿಂದ ಹೊರ ಹೋಗುವದನ್ನೂ ಸಾಧು ಜನರ ಅಭಿಪ್ರಾಯವನ್ನೂ ಕೇಳದೆ ಕನ್ವೀನರನ್ನಾಗಿ ಮಾಡಿ ಸಭೆ ಸೇರಿಸಿ ಸಾರ್ವಜನಿಕರನ್ನೂ ಪೋಸುಗೊಳಿಸುವ ಕಾರ್ಯವನ್ನು ಯಾರೂ ಮಾಡಬಾರದಾಗಿ ವಿನಂತಿ.

—ಚಿಂಣಪ್ಪ.

Coorg Forest Department

Mercara the 11th January, 50.

NOTICE.

A few elephants will be available for giving on hire from 1-2-1950.

Apply:- to the undersigned,

C. M. Kushalappa,
Chief Forest Officer, Coorg.

(೨ನೇ ಪುಟದಿಂದ ಸಾಗಿದ್ದು.)

ವಿವರವಾಗಿ ಎಲ್ಲವನ್ನೂ ವಿಷದಪಡಿಸಿರುವರು. ಸರಕಾರವು ಜನತೆಯನ್ನೂ ಜನ ಪ್ರತಿನಿಧಿಗಳನ್ನೂ ತಮ್ಮ ವಿಶ್ವಾಸಕ್ಕೆ ತೆದೆದುಕೊಳ್ಳದೆ ವರ್ತಿಸಿದೆ. ಇಡೀ ಹಿಂದೂ ದೇಶವು ಪ್ರಜಾಪ್ರಭುತ್ವವೆಂದು ಸಾರಲ್ಪಟ್ಟು ಎಲ್ಲೆಲ್ಲೂ ಹರ್ಷವಿರುವ ಸಮಯದಲ್ಲಿ ಇಲ್ಲೊಂದು ಸರಕಾರವು ಬಡ ರೈತನಿಗೆ ಹೆಚ್ಚಿನ ಕಂದಾಯ ಹೊರಿಸಲು ಸಿದ್ಧವಾಗಿದೆ. ಕೊಡಗಿನ ಆರ್ಥಿಕ ಸ್ಥಿತಿ ಜೆನ್ನಾಗಿಡೆ. ಭೂಸ್ತರಹದಲ್ಲಿ ನಿಂತಿರುವ ಕೊಡಗಿನ ಆರ್ಥಿಕತೆಯು ಇತರ ಅನೇಕ ಪ್ರಾಂತಗಳಿಗಿಂತಾ ಉತ್ತಮವಾಗಿದೆಯೆಸ್ನುತ್ತಿದ್ದ ಸರಕಾರವೂ, ಜನರೂ ಏಕಾಏಕಿ ಈ ಕಂದಾಯ ಮಸೂದೆಯನ್ನು ತಂದು ಬಡ ಜನರ ಮೇಲೆ ಹೇರಲೆತ್ನಿಸುವದರ ಅರ್ಥವೇನು?

ಶ್ರೀ. ಪಿ ಎಂ. ನಾಣಯ್ಯನವರು.

ಈ ಮಸೂದೆಯು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಈ ಮಸೂದೆಯ ಆವಶ್ಯಕತೆ ಇಲ್ಲ. ಇದು ಆರ್ಡಿನೆನ್ಸಿನಂತಿದೆ ಬಡ ಜನರ ಕೊಲೆ ಇಂದಾಗಲವದು. ಯಾವ ಭೂಮೂಲಿಕನೂ, ಪ್ಲಾಂಟರನೂ ಈ ಕಂದಾಯವನ್ನು ತೆರುವ ಸ್ಥಿತಿಯಲ್ಲಿಲ್ಲ ಸರಕಾರದ ತಿಳಿಗೇಡಿತನ ವರ್ತನೆ ಇದು. (ಈ ಮಧ್ಯೆ ಪ್ರೆಸಿಡೆಂಟರು 'ತಿಳಿಗೇಡಿತನ' ಎಂಬದು ಅಸಭ್ಯವಚನವೆಂದೂ ಅದನ್ನು ಹಿಂತೆಗೆದುಕೊಳ್ಳಬೇಕೆಂದೂ ಹೇಳಿದರು. ಭಾಷಣಕಾರರು ಹಿಂತೆಗೆದುಕೊಂಡರು) ಕೊಡಗಿನ ಬಡ್ಜೆಟ್ ಸ್ಥಿತಿ ಜೆನ್ನಾಗಿದೆ ಉಳುವರಿ ಸಾಕಷ್ಟಿದೆ. ಉಳುವರಿ ಇದ್ದೂ ಆ ಯೋಜನೆ ಈ ಯೋಜನೆಗೆಂದು ಕಂದಾಯ ಹೆಚ್ಚಲೆತ್ನಿಸುವದು ಇನ್ನೂ ಜನನವಾಗದ ಮಗುವಿಗೆ ಕುಲಾವಿ ಹೊಲಿಸಿದಂತೆ! ಕೊಡಗಿನ ಸರಕಾರದ ಆರ್ಥಿಕ ಅಭಿವೃದ್ಧಿಗಾಗಿ ಸಲಹೆ ಮಾಡಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಕಳೆದ ಅಕ್ಟೋಬರ್ ವಿಧಾನಸಭೆಯಲ್ಲಿ ಸೂಚಿಸಲಾಗಿತ್ತು. ಆದರೆ ಸರಕಾರವು ತನ್ನ ಚೈಯಂತೆ ವರ್ತಿಸುತ್ತಿದೆ ನಾವು ಸರಕಾರದ ತಾಳಕ್ಕೆ ಕುಣಿಯಬೇಕಾಗಿದೆ. ಸರಕಾರದ ಯೋಜನೆಗಳು ಆಕಾಶದಲ್ಲಿ ಅರಮನೆ ಕಟ್ಟಿದ ಹಾಗೆ. ಕೊಡಗು ಸರಕಾರವು ಉಪಯುಕ್ತ ಕೆಲಸ ಮಾಡಿಡೆಯೆಂದು ಶ್ರೀ. ಪಿ. ಏ. ಬೆಳ್ಯಪ್ಪನವರು ಹೇಳಿದರು. ಒಂದೊಂದಾಗಿ ನೋಡುವ, ಮಡಿಕೇರಿಯಲ್ಲಿರುವ ಆಸ್ಪತ್ರೆಯನ್ನೇ ತೆಗೆದುಕೊಂಡರೆ ಅಲ್ಲಿ ಪ್ಲಗ ಸಂಕೋಚವಾಗಿದೆ. ಈಗಿರುವ ಕಟ್ಟಡಗಳೂ ಸಾರ್ವಜನಿಕರಿಂದ ಕಟ್ಟಲ್ಪಟ್ಟಂಥಾವು. ಕಾಯಿಲೆ ಸ್ಥರು ವೆರಂಡಾಗಳಲ್ಲಿ ತುಂಬಿದ್ದಾರೆ. ಈ ಆಸ್ಪತ್ರೆಯ ಸ್ಥಿತಿಯೇ ಹೀಗಾದರೆ ಉಳಿದವುಗಳ ಸ್ಥಿತಿಯನ್ನು ಹೇಳಬೇಕೆ? ವಿದ್ಯಾ ಇಲಾಖೆಯಲ್ಲೂ ಅಭಿವೃದ್ಧಿ ಇಲ್ಲ. ಹೈಸ್ಕೂಲುಗಳ ಮಟ್ಟವು ಬಹು ಕೆಳಗಿಳಿದಿದೆ. ಈ ರೀತಿ ಇರುವಾಗ ಕಾಲೇಜಿನ ಲಾಭವೇನು? ಪರಿಣಾಮ ಅಧ್ಯಾಪಕರಲ್ಲ. ವಿದ್ಯಾಧಿಕಾರಿಗೆ ಹೇಳಿದರೆ ಚೀಫ್ ಕಮಿಷನರ ಮೇಲೆ, ಚೀಫ್ ಕಮಿಷನರನ್ನು ಕೇಳಿದರೆ ವಿದ್ಯಾಧಿಕಾರಿಗಳ ಮೇಲೆ ಹೇಳುತ್ತಾರೆ. ಶಾಲೆಗಳಲ್ಲಿ ಮಕ್ಕಳಿಗೆ ಕೂರಲು ಸರಿಯಾದ ಸ್ಥಳವಿಲ್ಲ. ನೀರಾವರಿ ಯೋಜನೆಯೂ ಹೀಗೆಯೇ ೧೯೨೪ ರಿಂದ ದೇವನೂರು ನಾಲೆ ರಿಪೇರಿಗೆ ಕೂಗಿಕೊಳ್ಳಲಾಗುತ್ತಿದೆ. ಅದನ್ನು ಪರೀಕ್ಷಿಸಲು ಬಂದವರ ಬತ್ಯವನ್ನು ಖರ್ಚು ಮಾಡಿದ್ದರೆ ನಾಲೆ ರಿಪೇರಿ ಆಗುತ್ತಿತ್ತು. ಕೊಲ್ಲಿತೋಡಿನ ಸ್ಥಿತಿಯೂ ಹೀಗೆಯೇ. ಬೆಳಗೂರಿನಲ್ಲಿ ಹೊಳೆಗೆ ಒಂದು ಕಟ್ಟೆಕಟ್ಟಲು ರೈತರಿಂದ ಅರ್ಧ ಹಣ ಹಾಕಿಸಿ ನಿರರ್ಥಕ ಖರ್ಚಾಯಿತು. ಸರಕಾರ ಏನೂ ಮಾಡಿಲ್ಲ. ಬಡ ರೈತನ ಶರೀರದಲ್ಲಿ ಇಂದು ಎಲುಬು ತೊಗಲೇ ಇದೆ. ಈ ಕಂದಾಯದಿಂದ ಅದೂ ಇಲ್ಲವಾಗಬಹುದು. ಕೊಡಗಿನ ರಸ್ತೆಗಳ ಗುದ್ದಿ ಕೇಳುವದೇನು? ಚೀಫ್ ಕಮಿಷನರೇ ಕೆಲವು ರಸ್ತೆಗಳಲ್ಲಿ ತಿರುಗಲು ಹೆದರುತ್ತಾರೆ. ಕೊಡಗು ಸರಕಾರವು ರೈತನ ಮೇಲೆ ಒಂದೇ ಪೈಸೆ ಹೆಚ್ಚು ಕಂದಾಯವನ್ನು, ಜನತೆಗೆ ಅಡಳಿತದಲ್ಲಿ ಹಕ್ಕು ದೊರೆಯುವ ವರೆಗೆ ಹಾಕಕೂಡದು.

ಶ್ರೀ. ಎನ್. ಸೋಮಣ್ಣನವರು.

ಜನತೆಯು ಕಂದಾಯ ಏರಿಸುವ ವಿಚಾರದಲ್ಲಿ ಸ್ಪಷ್ಟ ಅಭಿಪ್ರಾಯಕೊಟ್ಟಿದೆ. ಈ ಸಭೆಯು ಸದಸ್ಯರ ಕರ್ತವ್ಯವೇನ್ನು? ಕಂದಾಯ ಪದ್ಧತಿಯ ಚರಿತ್ರೆಯಲ್ಲೇ ಸಮರಿ ಕಂದಾಯದ ಮಾಧರಿ ಎಲ್ಲೂ ಇಲ್ಲ. ಕೊಡಗಿನಲ್ಲಿ ಮಾತ್ರ ಇದೆ. ಈಗಿರುವ ಕುದಾಯವೇ ತಲೆಗೆ ಭಾರವಾಗಿರುವಾಗ ಹೆಚ್ಚಿನ ಒಂದು ಪೈಯನ್ನು ಕೊಡಲು ಸಾಧ್ಯವಾಗದು. ಬಡಜನರ ಮೇಲೆ, ತೆರಿಲಾರದ ಕಂದಾಯ ಹೊರಿಸುವದು ಶಾಸನ ಸಭಾಪದಸ್ಯರ ಕೆಲಸವೇ? ಸೆಟ್ಲ್‌ಮೆಂಟ್ ಆಫೀಸರು ಬಂದಿದ್ದಾರೆ. ಅವರು ಪರಿಶೀಲಿಸಿ ಯೋಗ್ಯ ಕಂದಾಯದ ನಿಶ್ಚಿಯ ಮಾಡಲಿ. ಆದರೆ ಅಲ್ಲಿವರೆಗೆ ಸಮರಿ ಕಂದಾಯ ಹಾಕುವದನ್ನು ಯಾವ ನಾಗರಿಕ ಸರಕಾರವೂ ಮಾಡಕೂಡದು. ಕಾಫಿ ತೋಟ ಮಾಲೀಕರೂ ಜೆನ್ನಾಗಿಲ್ಲ. ತಂಬಾಕ್ಸ್ ಮಾಡಿ ಗೊಬ್ಬರ ಹಾಕುವ ಕೆಲವು ದೊಡ್ಡ ತೋಟಗಾರರಲ್ಲವೆ ಬೇರೆಯವರ ಸ್ಥಿತಿ ಜೆನ್ನಾಗಿಲ್ಲ. ಅದಕ್ಕಾಗಿಯೇ ಇಂಡಿಯನ್ ಪ್ಲಾಂಟರುಗಳ ಸಂಘವು ಕಂದಾಯವನ್ನು ವಿರೋಧಿಸಿ ತರಾವು ಮಾಡಿದೆ. ಇವರ ಜೊತೆಗೆ ಇವರಿಗೆ ಎಕ್ಸೈಸ್ ಪುತ್ತು ಆದಾಯ ಕಂದಾಯಗಳಿವೆ. ಕಾಫಿಯೆಂದೇ ವಾಣಿಜ್ಯ ದೃಷ್ಟಿಯಿಂದ ಬೆಲೆ ಇರುವ ಬೈಗಾರಿಕೆ- ಅದನ್ನು ಮುರಿಯಲೆತ್ನಿಸಬಾರದು. ಇದರಿಂದ ದೇಶಕ್ಕೆ ಆ ಹಿತವಾಗುವದು. ವ್ಯವಸಾಯ ಆದಾಯ ತೆರಿಗೆ ಬಂದರೆ ಅದು ನ್ಯಾಯಸಮ್ಮತವಾದದು ಆದರೆ ಈಮಸೂದೆಯು ಸಮರಿ ಕಂದಾಯ ಸಲ್ಲದು, ಇಷ್ಟೆಲ್ಲ ಏಕಕ್ಕಾಗಿ? ಪ್ರತಿ ವರ್ಷ ಬಜೆಟ್ಟಿನಲ್ಲಿ ಹಣ ವಿಟ್ಟರೂ ಖರ್ಚಾಗುವದಿಲ್ಲ. ೧೯೪೮-೪೯ ರಲ್ಲಿ ಯುದ್ಧೋತ್ತರ ಯೋಜನೆಗಳಿಗೆಂದು ಮೂರು ಗಿಲ ಲಕ್ಷ ರೂಪಾಯಿ ಇಟ್ಟು ಕಡೆಗೆ ಖರ್ಚಾದುದು ೫೦,೦೦೦! ಕಾಲೇಜಿಗೆ ೪ ಲಕ್ಷ ಈ ವರ್ಷ ಇಟ್ಟಿರುವರು. ಅದರಲ್ಲಿ ಒಂದಾಣೆಯೂ ಖರ್ಚಾಗಲಾರದು. ಏಕೆಂದರೆ ಈ ವರೆಗೆ ಕಾಲೇಜಿಗಾಗಿ ಒಂದು ಇಟ್ಟಿಗೆ ಕೂಡ ತಯಾರಾಗಿಲ್ಲ. ಕೊಡಗಿನ ಹೈಸ್ಕೂಲುಗಳು ರೈತರ ಬೆವರಿನ ಹಣದಿಂದ ಕಟ್ಟಲ್ಪಟ್ಟವುಗಳು. ಜನರಿಗಾಗಿ ಏನೂ ಮಾಡದೆ ಕಂದಾಯ ವಿಧಿಸುವದೆಂದರೆ ಅರ್ಥವಿಲ್ಲ. ಕಾಲೇಜಿನ ಜವಾಬ್ದಾರಿಯನ್ನು ಮಿಷನರಿಗಳಿಗೆ ಕೊಡಬೇಕೆಂದು ನಾವು ವಾದಿಸಿದೆವು. ಈಗ ಆ ಬಾಬಿನಲ್ಲಿ ೩೫ ಲಕ್ಷ ರೂಪಾಯಿಗಳ ಭಾರವನ್ನು ಹೊರಬೇಕಾಗಿದೆ. ಕೊಡಗಿನ ಭವಿಷ್ಯ ಪ್ರಶ್ನೆಗೂ ಈ ಮಸೂದೆಗೂ ಸಂಬಂಧವಿದೆಯೆಂಬುದು ಸರಿಯಲ್ಲ. ಈ ಮಸೂದೆಯಿಂದ ಬರಬಹುದಾದ ೪ ಲಕ್ಷ ರೂಪಾಯಿಗಳ ಮೇಲೆ ಕೊಡಗಿನ ಭವಿಷ್ಯ ನಿಂತಿಲ್ಲ. ಡೆಲ್ಲಿ ಶಮ್ಲೇಳನದಲ್ಲಿ ಕೊಡಗಿನಲ್ಲಿ ಹೊಸದಾಗಿ ೧೬೪ ಲಕ್ಷ ಉತ್ಪತ್ತಿಗೆ ನೂರ್ಗವಿದೆಯೆಂದಾಗ ಆದರಲ್ಲಿ ಸಮರಿ ಕಂದಾಯವೂ ಕೂಡಿತ್ತು. ಶ್ರೀ. ಬೆಳ್ಯಪ್ಪನವರು ಉತ್ಪತ್ತಿ ಆದರ ಎರಡರಷ್ಟು ಬರುವದೆಂದರು. ಆದರೆ ಹೊರಗೆ ಉತ್ಪನ್ನ ಉಡುಪು ಹಾಕಿಸನೆಂದಾಕ್ಷಣ ಅತನಲ್ಲಿ ಸಂಪತ್ತಿದೆಯೆಂದು ಭಾವಿಸಬಾರದು. ರೈತನು ನಿಜವಾಗಿಯೂ ಹೆಚ್ಚಿನ ಕಂದಾಯ ಕೊಡಬಲ್ಲನೇ ಎಂಬುದನ್ನು ನನ್ನ ಸ್ನೇಹಿತರು ಎದೆ ಮೇಲೆ ಕೈಯಿಟ್ಟು ಹೇಳಲಿ. ಇದು ಕೇವಲ ಆರ್ಥಿಕ ಪ್ರಶ್ನೆ. ಇದರಲ್ಲಿ ರಾಜಕೀಯಕ್ಕೆಡೆಯಿಲ್ಲ. ಸ್ವತಂತ್ರ ಭಾರತದಲ್ಲಿ ಬಡ ಜನರಿಗೆ ಇದೇ ಉಡುಗೊರೆಯೇ? ನಾವು ಕುರುಡಾಗಿ ವರ್ತಿಸಬಾರದು. ಮಸೂದೆಯನ್ನು ತಿರಸ್ಕರಿಸಬೇಕು.

ವಿಧಿ ಬಿಂದು

ಈ ಮಧ್ಯೆ ಶ್ರೀ ಸಿ. ಎಂ. ಪೂಣಚ್ಚನವರು ಒಂದು ವಿಧಿ ಬಿಂದು (point of order) ವನ್ನು ಎತ್ತಿ ಈ ಮಸೂದೆಗೆ ಗವರ್ನರ್ ಜನರಲ್ಲರ ಅನುಮತಿ ದೊರೆತಿದ್ದರೂ ಜನವರಿ ತಾರೀಕು ೨೬ ರ ನಂತರ ದೇಶದಲ್ಲಿ ನವರಾಜ್ಯ ಪದ್ಧತಿ ಜಾರಿಯಲ್ಲಿ ಬಂದು ಅದರ ನಂತರ ಚರ್ಚಿಸಲ್ಪಡುವ ಈ ಮಸೂದೆಗೆ ಹಿಂದೀ ಒಕ್ಕೂಟದ ಪ್ರೆಸಿಡೆಂಟರ ಅನುಮತಿ ಆವಶ್ಯವೆಂದೂ ಅಂಥಾ ಅನುಮತಿಯನ್ನು ಸದಸ್ಯರಿಗೆ ಮೊದಲೇ ತಿಳಿಸಬೇಕೆಂದೂ ಈ ವರೆಗೆ ನಡೆದ ಚರ್ಚೆ ವ್ಯರ್ಥವಾಗುವ ಸಂಭವವಿದೆಯೆಂದೂ ಸೂಚಿಸಿದರು.

ಈ ಮಸೂದೆಯ ನ್ಯೂನತೆಗಳು ಕೇಂದ್ರ ಸರಕಾರವು ತಾತ್ಕಾಲಿಕವಾಗಿ ಅನುಮತಿ ಕೊಟ್ಟಿದೆಯೆಂದೂ ಮಿಟಿಂಗನ್ನು ಮುಂದಕ್ಕೆ ಬಹುದೆಂದೂ ಪ್ರೆಸಿಡೆಂಟರು ಅಜ್ಞೆ ಇತ್ತರು.

ಶ್ರೀ ಎಚ್ ಟಿ. ಮುತ್ತಣ್ಣನವರು

ದೇಶದ ಏಳಿಗೆಯ ದೃಷ್ಟಿಯಿಂದ ಈ ಕಂದಾಯವು ಅವಶ್ಯ. ಆಸ್ಪತ್ರೆ ಜೆನ್ನಾಗಿಲ್ಲ, ಕೆರೆ ಬಾವಿ ಇಲ್ಲ, ರಸ್ತೆ ಇಲ್ಲ, ಸರಕಾರ ಏನೂ ಮಾಡಿಲ್ಲ ಎಂದು ಹೇಳುವದು ಸತ್ಯಸಂಗತಿಯಾಗದು. ಎರಡು ಮೂರು ವರ್ಷಗಳಲ್ಲಿ ಹೆಚ್ಚಾಲಿಗಾಗಿ ಐವತ್ತು ಅರುವತ್ತು ಸಾವಿರ ರೂ. ಗಳು ವೆಚ್ಚವಾಗಿವೆ. ಕಾಡು ಸೀಮೆಯಾದ ಹಂಗಕ್ಕೆ ೧೨,೦೦೦ ವೆಚ್ಚದಿಂದಲೂ, ಕಂದಳ್ಳಿಗೆ ೨೫,೦೦೦ ವೆಚ್ಚದಿಂದಲೂ ರಸ್ತೆಯಾಗುತ್ತಿದೆ. ಹೈಸ್ಕೂಲಿಗೆ ಜನತೆ ೪೦,೦೦೦ ಕೊಟ್ಟರೆ ಆನರಿಂದ ಹೈಸ್ಕೂಲಾಗಲಿಲ್ಲ. ಸೋಮವಾರಪೇಟೆ ಹೈಸ್ಕೂಲು ಕಟ್ಟಡದ ಕಂಟ್ರಾಕ್ಟ್ ಒಂದೂವರೆ ಲಕ್ಷಕ್ಕೆ ಕೊಡಲ್ಪಟ್ಟಿದೆಯೆಂದು ತಿಳಿಯುತ್ತೇನೆ. ೫೦ ಲಕ್ಷ ಉಳುವರಿ ಇದ್ದು ಪುನಹ ಕಂದಾಯವೇಕ? ಎಂಬುದು ಪ್ರಶ್ನೆಯಲ್ಲ. ಯಾವದೇ ಸರಕಾರ ಯೂ ವ್ಯಕ್ತಿಯೊಗಲೀ ಕೈಯಲ್ಲಿದ್ದುದನ್ನೆಲ್ಲಾ ವೆಚ್ಚ ಮಾಡಿ ನಂತರ ಆಕಾಶ ನೋಡುವದಲ್ಲ. ಪೆಟ್ಟಿಗೆಯಲ್ಲಿದ್ದ ನಿಕ್ಷೇಪವನ್ನು ವೆಚ್ಚ ಮಾಡಿ ಸಾಲ ತೆಗೆದು ನಂತರ ತನ್ನ ಆಸ್ತಿಯನ್ನೇ ಮೂರಾಟ ಮಾಡಿಸುವಂತೆ ಕೊಡಗಿನ ಸರಕಾರದ ಉಳುವರಿಯನ್ನು ಖರ್ಚು ಮಾಡಿಸಿ ಸಾಲ ಮಾಡಿಸಿ ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸುವ ಅಭಿಪ್ರಾಯವು ಸಂಯೋಜನಾ ಸ್ನೇಹಿತರದ್ದಾಗಿದೆ. ವೀರಾಜಪೇಟ್ಟೆ ಮಡಿಕೇರಿ ಮುನ್ಸಿಪಾಲಿಟಿಗಳಲ್ಲಿ ಬ್ರಿಟಿಷ್ ಇಂಡಿಯದಲ್ಲಿ ಎಲ್ಲಿಯೂ ಆಕ್ಟ್ರಾಯಿ ಕಂದಾಯ ಹಾಕಿ ಆದಾಯ ಪೂಡುತ್ತಿಲ್ಲವೇ? ಮಸೂದೆಯಲ್ಲಿ ಸೂಚಿತವಾದ ಕಂದಾಯ ಹೆಚ್ಚಾಯಿತು. ಇದನ್ನು ಕಡಿಮೆ ಮಾಡಬೇಕು. ಸರಕಾರಕ್ಕೆ ಕಂದಾಯ ಕೊಟ್ಟರೆ ಹಣ ಪರದೇಶಕ್ಕೆ ಓಡಿಹೋಗುವುದಿಲ್ಲ. ಅನಾವಶ್ಯಕ ಖರ್ಚು ತಡೆಯುವ ಹಕ್ಕು ನವಾಗಿದೆ. ಅದಕ್ಕೆ ನಮ್ಮೆಲ್ಲ ಒಕ್ಕಟ್ಟು ಬೇಕು. ಎರಡು ಪಕ್ಷದ ಸದಸ್ಯರೂ ಒಗ್ಗಟ್ಟಾಗಿ ಮಾಡುವ ತೀರ್ಮಾನವನ್ನು ತಿರಸ್ಕರಿಸುವ ಅಧಿಕಾರ ಈಗಿನ ಯಾವ ಚೀಫ್ ಕಮಿಷನರಿಗೂ ಇಲ್ಲ. ಹಾಗೆಯೇ ಒಗ್ಗಟ್ಟಾಗಿ ಕೇಳಿದರೆ ಬೇಕಾದ ರಾಜಕೀಯ ಸುಧಾರಣೆ ಬೋರಿಯವು ಧಾ. ಅದು ಬೇಕು, ಇದಾಗಬೇಕೆಂದು ಕೂಗಿ ಪ್ರಯೋಜನವಿಲ್ಲ. ಅವುಗಳನ್ನೆಲ್ಲಾ ಸಾಧಿಸಲು ಹಣ ಬೇಕು. ಹಣ ವಿದ್ದರೆ ಕೆಲಸವನ್ನು ಸರಕಾರದಿಂದ ಮಾಡಿಸುವುದು ಕಷ್ಟವಲ್ಲ. ೨೦೦ ಬಟ್ಟೆ ಭೂಮಿ ಐದು ಏಳು ಎಕ್ರೆ ತೋಟದವರಿಗೆ ವಿನಾಯಿತಿ ಇರಬೇಕೆಂಬ ವಿಚಾರಕ್ಕೆ ನಾನೊಪ್ಪುವದಿಲ್ಲ. ಬಡವರಿಗೇ ಸರಕಾರದಿಂದ ಹೆಚ್ಚಿನ ಸಹಾಯ ಬೇಕಾದುದು. ಆದುದರಿಂದ ಬಡವನು ಸ್ವಲ್ಪ ಹೆಚ್ಚು ಕಂದಾಯ ಕೊಟ್ಟರೆ ಐಶ್ವರ್ಯವಂತನು ದೊಡ್ಡ ಪ್ರಮಾಣದಲ್ಲಿ ಕೊಡಬೇಕಾಗುವುದು. ಹೀಗೆ ದೊರೆಯುವ ಹಣದಿಂದ ಬಡವನ ಹಿತ ಕೆಲಸ ಮಾಡಲು ಸಾಧ್ಯವಾಗುತ್ತೆ. ಎಲ್ಲವನ್ನೂ ಪರಿಶೀಲಿಸಿ ಯೋಗ್ಯರೀತಿ ಮಸೂದೆಯನ್ನು ತಿದ್ದುಪಡಿ ಮಾಡಲು ಇವನ್ನು ಸಿಲೆಕ್ಟ್ ಕಮಿಟಿಗೆ ಬಿಡುವದು ಹಿತ.

ಶ್ರೀ ಸಿ. ಎಂ. ಪೂಣಚ್ಚನವರು

ಆಧುನಿಕ ಕಂದಾಯ ಪದ್ಧತಿಗೆ ಈ ಮಸೂದೆಯು ವಿರೋಧ. ನೇರವಾದ ಕಂದಾಯ ಪದ್ಧತಿಯನ್ನು ಅವಶ್ಯ ಕಡಿಮೆ ಮಾಡಬೇಕೆಂದು ಇಂಡಿಯಾ ಸರಕಾರದ ನೀತಿ ಇರುವಾಗ ಅತ್ತನು ಬಡವನಿಕರಲಿ ಬಲ್ಲಿದನಿರಲಿ ಎಲ್ಲರಿಗೂ ಒಂದೇ ರೀತಿಯ ಈ ಕಂದಾಯವು ಆಧುನಿಕ ಕಾಲದಲ್ಲಿ ಯೋಗ್ಯವಲ್ಲ. ಬೆಳೆಸುವವನ ಪೂರ್ವ ಶಕ್ತಿಯನ್ನೇ ಆಯಿ, ಆ ಬಗ್ಗೆ ಯಾವ

ಕೊಡಗು ನ್ಯಾಯವಿಧಾಯಕ ಸಭೆ.

ಒನೇ ಪುಟದಿಂದ ಸಾಗಿದದ್ದು.

ಹೀ ರೀತಿಯ ಪರಿಶೀಲನೆ ಮಾಡದೆ ಈ ಸಮಂ ಕಂದಾಯದ ವಿಷಾಡು ರಾಜ್ಯಳ ಟನೆಯ ತತ್ವಗಳಿಗೂ ವಿರೋಧವಾಗಿದೆ.

ಕೊಡಗಿನ ಆರ್ಥಿಕ ಸ್ಥಿತಿಯ ಬಗ್ಗೆ ಮನೋರಂಜಕ ಕಥೆಗಳನ್ನು ಕೇಳುತ್ತಿದ್ದೇವೆ. ಮುಂಬರುವ ಐದಾರು ವರ್ಷಗಳ ವರೆಗೆ ಈಗಿರುವ ಉಳುವರಿಯಿಂದಲೇ ಯಾವುದೇ ತೊಡಕ್ಕಿಲ್ಲದೆ ಸಾಗಲು ಸಾಧ್ಯವಿದೆ. ಹೀಗಿರುವಾಗ ಈಗ ಹೊಸಕಂದಾಯವೇಕೆ? ಈ ಮಸೂದೆಯನ್ನು ನಮ್ಮ ಮುಂದಿರಿಸಿದ ಮಾದರಿಯೂದರೂ ತಂರಿತೆದ್ದಾಗಿದೆ. ಸಿಯಮದಂತೆ ಆರುವತ್ತು ದಿನಗಳಿಗೆ ಮುಂದೆ ಸದಸ್ಯರಿಗೆ ಇದು ತಿಳಿಯಬೇಕು. ಅದರೆ ಮೂರನೇ ಡಿಸೆಂಬರ್‌ನಲ್ಲಿ ಪ್ರಕಟವಾದ ಈ ಮಸೂದೆ ೧೫ನೇ ತಾರೀಕಿನ ಮೊಟ್ಟಗೆಗೆ ಇಡಲ್ಪಟ್ಟಿತು. ಈ ರೀತಿಯ ಅವಸರವೇನಿತ್ತೋ ತಿಳಿಯದು. ಹೀಗಾಗಿ ಸಾರ್ವಜನಿಕರ ಅಭಿಪ್ರಾಯವನ್ನು ಚೆನ್ನಾಗಿ ತಿಳಿಯಲು ನಮಗೆ ಅನುವಾಗಲಿಲ್ಲ ಆರ್ಥಿಕ ಸ್ಥಿತಿ ಚೆನ್ನಾಗಿದ್ದ ಕೊಡಗು ದಿವಾಳಿಯಾಗಿ ರೈತನು ಹೆಚ್ಚಿನ ಕಂದಾಯ ಕೊಡಬೇಕೆಂದಾಯಿತೇ? ಈ ಕಂದಾಯ ಏತಕ್ಕಾಗಿ? ನಾನಾ ಭರವಸೆಗಳ ಮೇಲೆ ಕೊಟ್ಟ ಕಡೆಗೆ ಏನೂ ಮಾಡದೆ ಜನಹಿತಕಲಸ ಸಂಕಷ್ಟ ನಡೆಯಲಿಲ್ಲ. ತಪ್ಪು ರೀತಿಯ ಬಡ್ಜೆಟ್ ಲೆಕ್ಕ, ಸರಿಯಲ್ಲದ ರೀತಿಯ ಆಡಳಿತ. ಕಡೆಗೆ ಕಂದಾಯವಭಾರ ರೈತನ ಮೇಲೆಯೇ? ಇದು ನ್ಯಾಯವಲ್ಲ. ೧೫ಳಿಂದ ಉಪಯುಕ್ತ ಕೆಲಸ ಮಾಡುತ್ತಿದೆಯೆಂದು ಹೇಳಿದರೂ ನನಗೆ ಹೆಚ್ಚೇನೂ ಕಾಣುತ್ತಿಲ್ಲ. ಒಂದು ವೇಳೆ ಸರಕಾರಕ್ಕೆ ಹೆಚ್ಚಿನ ಹಣದ ಆವಶ್ಯಕತೆ ಇದೆಯೆಂದು ಒಂದು ಕ್ಷಣಕ್ಕೆ ಒಪ್ಪಿದರೂ ಸರಕಾರದ ಆದಾಯ ಹೆಚ್ಚಿಸಲು ಬೇರೆ ಮಾರ್ಗಗಳಿಲ್ಲವೇ? ಬಡಜನರಿಗೆ ಈ ಪೆಟ್ಟು ಹಾಕುವದೇ? ಈ ಮಸೂದೆಯು ಸಮೂಲವಾಗಿ ತಿರಸ್ಕರಿಸಲ್ಪಡಬೇಕು. ಈ ಪ್ರಶ್ನೆಯನ್ನು ಮರೆಸಲು ಸಾಧನವಾಗಿ ಪ್ರತ್ಯೇಕ ಸಂಯೋಜನಾ ಮಾತುಗಳನ್ನು ತಂದು ರಾಜಕೀಯ ಒಣ್ಣ ಹಾಕಲಾಗಿದೆ. ಕೊಡಗಿನ ಭವಿಷ್ಯಕ್ಕೂ ಇದಕ್ಕೂ ಸಂಬಂಧವಿಲ್ಲ. ನೆಲಕ್ಕೆ ಅಪ್ಪಳಿಸಿದ ಚೆಂಡು ಪುಟಿದು ಹಿಂದಕ್ಕೆ ನೆಗೆಯುವಂತೆ ಕೊಡಗನ್ನು ಪ್ರತ್ಯೇಕ ಮಾಡುವ ಈ ಪ್ರಯತ್ನವೇ ವಿಲೀನೀಕರಣಕ್ಕೆ ಕಾರಣವಾದೀತು. ದೇಶದ ಆರ್ಥಿಕ ಸ್ಥಿತಿಯು ಜನತೆಯ ಸಂಪತ್ತಿನ ಮೇಲೆ ನಿಂತಿದೆ. ಈ ಸಂಪತ್ತನ್ನು ಸದಭಿವೃದ್ಧಿಗೊಳಿಸುವ ಯಾವದೇ ಪ್ರಯತ್ನವು ಅಪಾಯಕರವೆಂದೇ ಕೂಡಿದ್ದಾಗಿದೆ. ರೈತನ ಮತ್ತು ಕಾಫಿ ವ್ಯವಸಾಯಗಾರನ ಸ್ಥಿತಿ ಚೆನ್ನಾಗಿಲ್ಲ. ಜನತೆಯ ನಿಜಸ್ಥಿತಿಯನ್ನರಿಯದೆ ಮೇಲೆ ಹೊರಿಸಲ್ಪಡುವ ಈ ಮಸೂದೆಗೆ ನಾವು ಒಪ್ಪಲಾರೆವು. ನಮ್ಮಲ್ಲಿ ಕೆಲವರಿಗೆ ರಾಜಕೀಯ ಆತ್ಮ ಪ್ರೀತಿ ಬಂದು ಹೋಗಿದೆ. ಅವರು ಮಾಡಿದ್ದೇ ಸರಿ, ಅವರದ್ದೇ ನ್ಯಾಯವೆಂಬ ನೀತಿ ಬಂದಿದೆ. ವಿಶಾಲ ದೃಷ್ಟಿಯಿಂದ ನೋಡುವ ಅಭ್ಯಾಸ ಅವರಿಗಿಲ್ಲ. ವಿಚಿತ್ರ ಕನಸಿನ ಕಥೆ ಕಟ್ಟಿಕೊಂಡು ಅವರು ವರ್ತಿಸುತ್ತಾರೆ. ಈ ಕಥೆಗಳಿಂದ ದೇಶದ ಪ್ರಗತಿಯಾಗದು. ಪ್ರತಿಯೊಬ್ಬ ಚೇಫ್ ಕಮಿಷನರು ಬದಲಾದಾಗ ಹೊಸ ಆಶೆ ಭರವಸೆಗಳನ್ನು ತಾನು ಮಟ್ಟಿದ್ದೆಲ್ಲವೂಚಿನ್ನವಾಗುವದೆಂಬ ನಂಬಿಕೆಯನ್ನು ಅವರು ಕೊಡುತ್ತಾರೆ. ಆದರೆ ನಾವು ಎಲ್ಲಿ ಇದ್ದೇವೊ ಅಲ್ಲಯೇ ಇದ್ದೇವೆ. ಜನತೆಯು ಹಿಂತಕ್ಕಾಗಿ ದುಡಿಯದ ಕರ ಏರಿಸಲು ಈ ಸರಕಾರಕ್ಕೆ ನ್ಯಾಯ ಸಮರ್ಪಕವಹಕ್ಕಿಲ್ಲ.

೧೯೧೨ರಲ್ಲಾದ ಸೆಟ್ಲ್‌ಮೆಂಟನ್ನು ಪರಿಶೀಲಿಸಿದರೆ ಕೊಡಗಿನಲ್ಲಿ ಒಂದನೇ ದರದ ಭೂಮಿಯಿಲ್ಲವೆಂದು ಗೊತ್ತಾಗುವದು. ನೆರೆ ಪ್ರಾಂತಗಳ ಕಂದಾಯ ಪದ್ಧತಿಗೂ ಮತ್ತು ದರಕ್ಕೂ ಇಲ್ಲಿಗೂ ವ್ಯತ್ಯಾಸವಿಲ್ಲ. ನೆರೆಪ್ರಾಂತದ ಎರಡನೇ ಶರಂ ಕೊಡಗಿನ ಒಂದನೇ ತರಂ ಭೂಮಿಯಾಗಿದೆ. ನೆರೆಪ್ರಾಂತದಲ್ಲಿ ಆರು ವಿಧದ ತರಂಗಗಳವೆ. ಎಕ್ರಗೆ ಒಂದೂವರೆಯಿಂದ ಎರಡು ರೂಪಾಯಿಗಳ ವರೆಗೆ ಕಂದಾಯವಿದೆ. ವೈಕೂರಿನಲ್ಲಿ ಕಾಫಿಗೆ ಒಂದೂವರೆ ರೂಪಾಯಿ ಕಂದಾಯ. ನಮ್ಮಲ್ಲಿಯ ಕಂದಾಯ ನೆರೆಪ್ರಾಂತುಗಿಂತಾ ಎಂದೂ ಕಡಿಮೆಯಿಲ್ಲ. ಕೇಂದ್ರ ಸರಕಾರಕ್ಕೆ ಇಲ್ಲಿಯ ಸ್ಥಿತಿಯು ತಪ್ಪಭಿಪ್ರಾಯವನ್ನು ಕೊಟ್ಟಿರಬೇಕು. ನೆರೆಪ್ರಾಂತಗಳನ್ನು ಎಲ್ಲಾ ವಿಚಾರಗಳಲ್ಲಿಯೂ ಅನುಸರಿಸುವ ಸಂಪ್ರದಾಯವಿರುವ ಈ ಸರಕಾರವು ನೆರೆಯವರು ಕಡಿಮೆ ಕಂದಾಯ ಕೊಡುತ್ತಿರುವಾಗ ಇಲ್ಲಿಯವರಿಗೆ ಹೆಚ್ಚು ಮಾಡಬಾರದು. ವ್ಯವಸಾಯ ಆದಾಯ ತೆರಿಗೆಯನ್ನು ತಾರದೆ ಈ ಖಡ್ಡಾಯ ಕಂದಾಯದ ಮಾರ್ಗವೇಕೆ? ಇದನ್ನು ಸಿಲೆಕ್ಟ್ ಕಮಿಟಿಗೆ ಬಿಟ್ಟು ಅವರು ಗ್ರಾಮ ಗ್ರಾಮ ಸುತ್ತಿ ಅಭಿಪ್ರಾಯ ತೆಗೆದುವದು ಆಗದ ಮಾತು. ಇದರಿಂದ ದೇಶದಲ್ಲಿ ಅವ್ಯವಸ್ಥೆಯೇ ಆದೀತು. ಕೆಲವರಿಗೆ ಕಂದಾಯ ವಿನಾಯಿತಿ ಕೊಡುವ ಸೂಚನೆಯು ದೇಶದ ಶಾಂತಿಗೆ ಭಂಗ ತಂದೀತು ಅದು ಯಾವ ಕಂದಾಯವೇ ಆಗಲೀ, ಒಂದು ಕಾಸೇ ಆಗಲೀ ಈ ಖಡ್ಡಾಯ ರೀತಿಯ ತಾರತಮ್ಯವರಿಯದ ಕಂದಾಯವನ್ನು ವಿರೋಧಿಸಲೇಬೇಕು.

ಶ್ರೀ. ಕೆ. ಪಿ. ಕರುಂಬಯ್ಯನವರು.

ಈ ಮಸೂದೆಯಲ್ಲಿ ಕೊಡಗಿನ ಭವಿಷ್ಯದ ರಾಜಕೀಯ ಸಮಸ್ಯೆಯೂ ಸಮೂಹೇಶವಾಗಿಲ್ಲವೆಂಬುದು ಸರಿಯಲ್ಲ. ಕಂದಾಯ ಹಕ್ಕವ ಯಾವದೇ ಸೂಚನೆಯು ಈ ಸಭೆಯಲ್ಲಿ ಬಂದರೂ ಅದನ್ನು ವಿರೋಧಿಸುವವರಿದ್ದಾರೆ ಎಂಬುದು ನಮ್ಮ ಅನುಭವದ ಮಾತು. ಕೊಡಗಿನ ಆದಾಯವನ್ನು ಕಡಿಮೆ ಮಾಡಿ ಆರ್ಥಿಕ ಸ್ಥಿತಿಯನ್ನು ಶಿಥಿಲಗೊಳಿಸಿ ವಿಲೀನೀಕರಣಕ್ಕೆ ಮಾರ್ಗ ಮಾಡುವದೇ ಇವರ ಧ್ಯೇಯವೆಂದು ಬೇರೆ ಹೇಳಬೇಕಿಲ್ಲ. ಸಾರ್ವಜನಿಕರ ಕಣ್ಣು ಕಟ್ಟಲು ಇಲ್ಲಸಲ್ಲದ ಪ್ರಚಾರ ಮಾಡಬಾರದು. ಡೆಲ್ಲಿಯಲ್ಲಿ ನಡೆವ ಸಮ್ಮೇಳನದ ಕಾಲಕ್ಕೆ ಉಳುವರಿ ಇರುವ ಐನತ್ತಲಕ್ಷದ ಮಾತೇ ಬರಲಿಲ್ಲ. ಹೆಚ್ಚಿಗೆ ಕಂದಾಯ ಹಾಕಲಾಗುವದಿಲ್ಲ, ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ, ಪ್ರತ್ಯೇಕವಿರಲು ಸಾಧ್ಯವಿಲ್ಲ ಆದ್ದರಿಂದ ಹತ್ತೇ ದಿನಗಳಲ್ಲಿ ಜನಾಭಿಪ್ರಾಯ ತೆಗೆಯದೆ ಬೇರೆಪ್ರಾಂತದೊಡನೆ ಸಂಯೋಜನೆಯಾಗಬೇಕೆಂದು ಕೂಗಿಕೊಂಡವರು ಈಗ ಕಂದಾಯದ ಮಟ್ಟಿಗೆ ಜನರ ಅಭಿಪ್ರಾಯ ತೆಗೆಯುವಂತೆ ಮಾತಾಡುತ್ತಿದ್ದಾರೆ. ವ್ಯವಸಾಯ ಆದಾಯ ತೆರಿಗೆ ಮಸೂದೆಯು ಕಳೆದ ಚೌನ್ಸಿಲ್ಲಿನಲ್ಲಿ ಒಂದಾಗ ಇವರೇ ಅದನ್ನು ವಿರೋಧಿಸಿದರು.

೧೯೦೭–೧೭ರ ಸ್ಥಿತಿ ಇಂದಿಲ್ಲ. ಆ ಸಾಧ್ಯ ಬದಲಾವಣೆಯಾಗಿದೆ. ದೇಶದ ಹಿತದೃಷ್ಟಿಯಿಂದ ಅದರಲ್ಲೂ ಸ್ವತಂತ್ರಿಗಳಾದ ನಾವು ಹೆಚ್ಚಿನ ಭಾರವನ್ನು ಹೊರಬೇಕು. ೧೯೦೭ರಲ್ಲಿ ಒಂದು ಬಟ್ಟೆ ಬತ್ತಕ್ಕೆ ೨ ರೂ. ಇತ್ತು. ಒಬ್ಬ ಸರಕಾರಿ ಜವಾನನ ಸಂಬಳ ಮಾಸಿಕ ೭ ರೂಪಾಯಿ ಇತ್ತು. ಅಂದಿನ ಸರಕಾರದ ಒಟ್ಟು ಖರ್ಚು ಸುಮಾರು ೧೨ ಲಕ್ಷವಿತ್ತು. ಆದರೆ ಇಂದು ಒಂದು ಬಟ್ಟೆ ಬತ್ತಕ್ಕೆ ರೂ ೧೨ ಕ್ರಯವಿದೆ. ಜವಾನನ ಸಂಬಳ ೩೫ ಆಗಿದೆ. ಸರಕಾರದ ಖರ್ಚು ೪೦ ಲಕ್ಷಕ್ಕೆ ಏರಿದೆ. ಹೀಗಿರುವಾಗ ಅಂದಿನ ಜವಾಬ್ದಾರಿಯೇ ಇಂದಲ್ಲ; ಸ್ವಲ್ಪ ಹೆಚ್ಚಿನ ಜವಾಬ್ದಾರಿ ಸರ್ವರ ಮೇಲಿದೆ. ಮಸೂದೆಯಲ್ಲಿ ಸೂಚಿತವಾಗಿರುವ ದರಕ್ಕೆ ನಾನು ವಿರೋಧಿಸುತ್ತೇನೆ. ಇದನ್ನು ಪರ್ಯಾಲೋಚಿಸಿ ಯೋಗ್ಯ ದರ ನಿಶ್ಚಯ ಮಾಡಲು ಸಿಲೆಕ್ಟ್ ಕಮಿಟಿಗೆ ಬಿಡುವದು ಸೂಕ್ತವಾಗಿದೆ. ನಮ್ಮ ಪ್ರತ್ಯೇಕ ಅಸ್ತಿತ್ವವನ್ನು ಇಲ್ಲದೆ ಮಾಡಲು ಪ್ರಯತ್ನ ನಡೆದಿರುವಾಗ ನಾವು ಸ್ವಲ್ಪ ಹೆಚ್ಚಿನ ಹೊರೆಯನ್ನು ಹೊತ್ತಾದರೂ ವ್ಯಕ್ತಿತ್ವವನ್ನು ಉಳಿಸಬೇಕು. ಕೊಡಗಿನ ಇಂಜಿನಿಯರಿಂಗ್ ಇಲಾಖೆಯೊಂದನ್ನು ಬಿಟ್ಟು ಉಳಿದ ಎಲ್ಲಾ ಖಾತೆಗಳಲ್ಲೂ ಪ್ರಗತಿ ಇದೆ. ನಮ್ಮ ನೆರೆಯ ಪ್ರಾಂತದ ರೈತನಿಗಿಂತಾ ನಮ್ಮ ರೈತನು ಸುಖಜೀವನ ನಡೆಸುತ್ತಿಲ್ಲವೆನ್ನಲು ಯಾರಿಗೂ ಸಾಧ್ಯವಿಲ್ಲ ಈತನು ಆತನಿಗಿಂತಾ ಎಷ್ಟೊ ಉತ್ತಮ ಸ್ಥಿತಿಯಲ್ಲಿದ್ದಾನೆ. ಕೊಡಗಿನ ಭೂಮಿಯು ನೆರೆ ಪ್ರಾಂತಗಳಷ್ಟು ಫಲವತ್ತಾಗಿಲ್ಲವೆಂಬುದನ್ನು ಒಪ್ಪಲಾಗುವದಿಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಸರಾಸರಿಯೂಗಿ ಒಂದು ಏಕ್ರೆ ಕಾಫಿ ತೋಟದಲ್ಲಿ ಎರಡು ಹಂಡ್ರೆಡ್ ವೈಟ್ ಕಾಫಿಯಾದರೆ ಕೊಡಗಿನ ಒಂದು ಏಕ್ರೆಯಲ್ಲಿ ೩ ಹಂಡ್ರೆಡ್ ವೈಟ್ ಆಗುತ್ತದೆ. ಇದರಿಂದಲೇ ಕೊಡಗು ಫಲವತ್ತಾಗಿದೆಯೆಂದು ಹೇಳಬಹುದು. ಈ ಕಂದಾಯದ ಮಸೂದೆಯ ಒಗ್ಗೆ ಇಲ್ಲವೆಲ್ಲದ ಪ್ರಚಾರದಿಂದ ಜನರು ಗಾಬರಿಗೊಂಡಿದ್ದೇ ವಿನಹ ಬೇರಲ್ಲ. ಕಾಫಿ ತೋಟಗಾರನು ಏಕ್ರೆಗೆ ಕೇಂದ್ರ ಸರಕಾರಕ್ಕೆ ೬೩ ರೂಪಾಯಿ ಆಪ್ರತ್ಯಕ್ಷ ಎಸ್ಟೇಟ್ ಕಂದಾಯ ತೆರುತ್ತಿರುವನು. ಈ ಸರಕಾರ ಸೂಚಿಸಿರುವ ೬ ರೂಪಾಯಿಗೆ ಗಾಬರಿಪಡಲು ಕಾರಣವಿಲ್ಲ, ಪ್ರತಿ ಏಕ್ರೆಗೆ ಕಾಫಿ ವ್ಯವಸಾಯಗಾರನು ೩೦೦ ರೂ. ಖರ್ಚು ಮಾಡುತ್ತಾನೆ. ಈ ರೂ. ೬ ಕಂದಾಯ ಹೆಚ್ಚಿನದಲ್ಲ. ಕೊಡಗಿನ ಕಾಫಿ ವ್ಯವಸಾಯಗಾರರ ಹಿತವನ್ನು ಕೊಡಗು ಸರಕಾರವು ಕಾದಿದೆ. ೧೯೩೦ರಲ್ಲಿ ಆರ್ಥಿಕ ಬಿಕ್ಕಟ್ಟಿನಿಂದ ತೋಟಗಳು ಕಾಡುಪಾಲಾಗುವಂತಿದ್ದಾಗ ತೋಟಗಾರರಿಗೆ ಐದುಲಕ್ಷ ರೂಪಾಯಿಗಳ ಸಾಲಕೊಟ್ಟು ಸಹಾಯವೂ ಮಾಡಿದೆ. ವ್ಯವಸಾಯ ಆದಾಯ ತೆರಿಗೆ ಜಾರಿಯಲ್ಲಿ ಬಂದಿದ್ದರೆ ಈ ಕಂದಾಯ ಮಸೂದೆಯ ಅವಶ್ಯಕತೆ ಇರಲಿಲ್ಲ ಕೊಡಗಿನ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಲು ಯಾವನೂ ಜೀವ್ಯ ತ್ಯಾಗ ಮಾಡಲು ಹಿಂಜರಿಯನು. ಬೆಳಗ್ಗಿನ ವಿರೋಧ ಪ್ರದರ್ಶನಕ್ಕೆ ಪ್ರದರ್ಶನಕ್ಕೆರುವ ಬೆಲೆಯೇ ವಿನಹ ಹೆಚ್ಚಿನದಲ್ಲ. ಅಲ್ಲಿದ್ದವರು ದೇಶದ ಎಲ್ಲಾ ಭಾಗದವರಾಗಲೀ ಯಾ ಪ್ರತಿನಿಧಿಗಳಾಗಲೀ ಅಲ್ಲ. ಮದ್ರಾಸಿನಲ್ಲಿ ಮಾರಾಟ ತೆರಿಗೆ ಹಾಕಿದಾಗ ನಮ್ಮ ಮುನ್ಸಿಪಾಲಿಟಿಗಳಲ್ಲಿ ಆಕ್ಟ್ರಾಯಿ ಹಾಕಿದಾಗಲೂ ಹೀಗೆ ಪ್ರತಿಭಟನೆ ನಡೆದಿತ್ತು. ಕ್ರಮಶಃ ಅವುಗಳ ಉಪಯುಕ್ತತೆಯು ಅರಿವಾಗಿ ಶಾಂತವಾತಾವರಣ ಏರ್ಪಟ್ಟಿದೆ. ಈಗ ಅವುಗಳನ್ನು ಸಮರ್ಥಿಸುವ ಸದಸ್ಯರಿಗೆ ಕಡಿಮೆ ಇಲ್ಲ. ಸರಕಾರದ ಬೊಕ್ಕಸದಲ್ಲಿ ಹೆಚ್ಚು ಹಣವಿದ್ದರೆ ದೇಶಕ್ಕೇ ಹಿತ. ಕೇಂದ್ರ ಸರಕಾರವೇ ಆಗಲೀ ಪ್ರಾಂತೀಯ ಸರಕಾರವೇ ಆಗಲೀ ಜನತೆಯು ಕೂಗಿಗೆ ಕಿವಿಗೊಡಬೇಕು. ತಾತ್ಕಾಲಿಕ ಪ್ರಚಾರ ಮಾಡುವದನ್ನು ನಿಶೇಧಿಸಬೇಕು. ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡುವ ಸೂಚನೆಗೆ ನನ್ನ ಸಮರ್ಥನೆ ಇದೆ.

ನಂತರ ಪ್ರೆಸಿಡೆಂಟರು ಉಪಸೂಚನೆಯನ್ನು ಓಟಿಗೆ ಹಾಕಿದರು. ಶ್ರೀಗಳಾದ ಕೆ. ಪಿ. ಕರುಂಬಯ್ಯ, ಕೆ. ಪಿ. ಅಪ್ಪಯ್ಯ, ಪಿ ಐ. ಬೆಳ್ಯಪ್ಪ, ಕೆ. ಎಂ. ಕಶಾಲಪ್ಪ, ಎಚ್.ಟಿ ಮುತ್ತಣ್ಣ ಮತ್ತು ಸರಕಾರಿ ಸದಸ್ಯರು ಪರವಾಗಿಯೂ, ಶ್ರೀಗಳಾದ ಎನ್. ಸೋಮಣ್ಣ, ಕೆ. ಮಲ್ಲಪ್ಪ, ಸಿ. ಎಂ. ಪೂಣಚ್ಚ, ಎಸ್. ಎಸ್. ನಾರಾಯಣಮೂರ್ತಿ, ಕ. ಎಂ. ದೇವಯ್ಯ, ಎಚ್. ಬಿ. ಅಣ್ಣಯ್ಯ, ಪಿ. ಎಂ ನಾಣಯ್ಯ ಮತ್ತು ಕೆ.ಕೆ. ಬೆಳ್ಯಪ್ಪ ಇವರುಗಳು ವಿರೋಧವಾಗಿಯೂ ಓಟುಮಾಡಿದರು. ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡುವದೇಕೆಂಬ ಸೂಚನೆಯು ಪಾಸಾಯಿತು.

ನಂತರ ಶ್ರೀಗಳಾದ ಕೆ. ಪಿ. ಕರುಂಬಯ್ಯ, ಕೆ. ಪಿ. ಅಪ್ಪಯ್ಯ, ಎಚ್. ಟಿ. ಮುತ್ತಣ್ಣ, ಕೆ. ಎಂ. ಕುಶಾಲಪ್ಪ, ಅಬ್ದುಲ್‌ರಹಮಾನ್ ಖಾನ್, ಪಿ. ಐ. ಬೆಳ್ಯಪ್ಪ ಮತ್ತು ಫೈನಾನ್ಸ್ ಮೆಂಬರು (ಅಧ್ಯಕ್ಷರು) ಇವುಗಳಿಂದ ಕೂಡಿದ ಸಿಲೆಕ್ಟ್ ಕಮಿಟಿಯನ್ನು ನೇಮಿಸಲಾಯಿತು.

ಚೌನ್ಸಿಲು ಸಭೆಯು ಮಧ್ಯಾಹ್ನ ೨–೫೦ ಕ್ಕೆ ಮುಂಕ್ತಾಯಗೊಂಡಿತು.

"ಕೊಡಗು" ವಿಜಂಟರು,
ವೀರಾಜಪೇಟೆ.

ಶ್ರೀ. ಟಿ. ಎನ್. ಗೋವಿಂದರಾಜು.